ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 6 | ಸಂಚಿಕೆ 12 | ಡಿಸೆಂಬರ್ 2021



ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನಡೆದ 13ನೇ ಪದವೀಧರರ ದಿನಾಚರಣೆ. ಶ್ರೀ ಪಿ. ಶಿವಾನಂದ ಭಾರತಿ, ಪ್ರೊ. ಕೆ.ಎಸ್. ಸುರೇಶ್, ಸರ್ವೋಚ್ಚ ನ್ಯಾಯಾಲಯದ ಗೌ.ನ್ಯಾ. ಶ್ರೀ ಸಿ.ಟಿ. ರವಿಕುಮಾರ್, ಕರ್ನಾಟಕ ಉಚ್ಚ ನ್ಯಾಯಾಲಯದ ಗೌ.ನ್ಯಾ. ಶ್ರೀಮತಿ ಎಸ್. ಸುಜಾತಾ, ಡಾ. ಸಿ.ಜಿ. ಬೆಟಸೂರಮಠ, ಡಾ. ಎಸ್. ನಟರಾಜು ಹಾಗೂ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿದ್ದಾರೆ (30 ಅಕ್ಟೋಬರ್ 2021)



ಧಾರವಾಡದ ಕೆಲಗೇರಿಯ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಮುಂಬೈನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಡಿಸಬಲಿಟೀಸ್ ವತಿಯಿಂದ ಏರ್ಪಡಿಸಲಾಗಿದ್ದ ಉಚಿತ ವಾಕ್ ಮತ್ತು ಶ್ರವಣ ತಪಾಸಣಾ ಶಿಬಿರದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಶಿಬಿರಾರ್ಥಿಯೊಡನೆ ಸಮಾಲೋಚಿಸುತ್ತಿರುವುದು




ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 19.11.2021 ರಂದು ನಡೆದ 236ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದುಷಿ ಮಹತೀ ರಘುರಾಮ್ ಗಾಯನ ಪ್ರಸ್ತುತಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ನಂದನ್ ಕಶ್ಯಪ್ ಹಾಗೂ ವಿದುಷಿ ಸಿ.ವಿ. ಶ್ರುತಿರವರುಗಳಿದ್ದಾರೆ

## ಸುತ್ತೂರು ಶ್ರೀಕ್ಷೇತ್ರದಲ್ಲಿ ಶಿವದೀಪೋತ್ಸವದ ಸಂಭ್ರಮ

ಶಿವದೀಪೋತ್ಸವದ ಅಂಗವಾಗಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಸೋಮೇಶ್ವರ, ಶ್ರೀ ಮಹದೇಶ್ವರ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ನಾರಾಯಣಸ್ವಾಮಿ ದೇವಾಲಯಗಳಲ್ಲಿ ಶುಕ್ರವಾರ ಸಂಜೆ ವಿಶೇಷ ಪೂಜಾ ಕಾರ್ಯಕ್ರಮಗಳು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದವು.

ಶಿವದೀಪೋತ್ಸವದಲ್ಲಿ ಮಹಾಮಂಗಳಾರತಿ, ಪ್ರಾಕಾರೋತ್ಸವ ನೆರವೇರಿತು. ಸುತ್ತೂರು ಶಾಲೆಯ ಸಂಗೀತ ಶಿಕ್ಷಕರು ವಚನಗಾಯನ ಮತ್ತು ಭಕ್ತಿಗೀತೆಗಳನ್ನು ಹಾಡಿದರು. 25ಕ್ಕೂ ಹೆಚ್ಚು ವಟುಗಳಿಗೆ ಶಿವದೀಕ್ಷೆ-ಲಿಂಗದೀಕ್ಷೆ ನೀಡಲಾಯಿತು. ಶಿವದೀಪೋತ್ಸವದ ಅಂಗವಾಗಿ ದೇವಾಲಯಗಳಿಗೆ ವಿಶೇಷ ದೀಪಾಲಂಕಾರ ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ಹೊಸಮಠ, ಕುದೇರು, ಹುಲಿಯೂರುದುರ್ಗ, ದಂಡಿಕೆರೆ, ಆಲಮಟ್ಟಿ, ಚುಂಚನಹಳ್ಳಿ, ನವಿಲೂರು, ಶಿರಮಳ್ಳಿಮಠ ಮೊದಲಾದ ಮಠಗಳ ಶ್ರೀಗಳು, ಹರಗುರು ಚರಮೂರ್ತಿಗಳು, ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಆರ್. ಚೇತನ್, ಅಮೇರಿಕಾದ ಅಕ್ಕ ಸಮಾವೇಶದ ಸಂಚಾಲಕರು ಹಾಗೂ ಉದ್ಯಮಿಗಳಾದ ಶ್ರೀ ಶಂಕರ್‌ಶೆಟ್ಟಿರವರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತಾದಿಗಳು ಈ ಸಂದರ್ಭದಲ್ಲಿ ಭಾಗವಹಿಸಿದ್ದರು. □

## ಜ್ಞಾನವಾರಿಧಿ

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪ್ರತಿ ಸೋಮವಾರ ನಡೆಯುವ ಜ್ಞಾನವಾರಿಧಿ ಉಪನ್ಯಾಸದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಧರ್ಮ, ಅಧ್ಯಾತ್ಮ, ಯೋಗ, ಆರೋಗ್ಯ, ಜೀವನಶೈಲಿ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ. ಆನ್‌ಲೈನ್ ಮೂಲಕ ನಡೆಯುವ ಈ ಉಪನ್ಯಾಸ ಕಾರ್ಯಕ್ರಮವು ಸಾಕಷ್ಟು ಜನಪ್ರಿಯಗೊಂಡಿದೆ. ಉಪನ್ಯಾಸದ ನಂತರ ವೀಕ್ಷಕರ ಆಯ್ದ ಪ್ರಶ್ನೆಗಳಿಗೆ ಉತ್ತರಿಸಲಾಗುವುದು.

### ಬಸವಾದಿ ಪ್ರಮಥರು ಕನ್ನಡವನ್ನು ಎತ್ತರಕ್ಕೆ ಏರಿಸಿದವರು



ವಚನಗಳು ಕನ್ನಡದ ಅಭಿವ್ಯಕ್ತಿಯ ಸಂಪತ್ತುಗಳು; ಇವು ವಚನಕಾರರ ಹೆಗ್ಗಳಿಕೆ. ಇಷ್ಟಲಿಂಗವನ್ನು ಕೇಂದ್ರವಾಗಿಟ್ಟುಕೊಂಡು ಸಾಧಿಸುವ ಯೋಗಮಾರ್ಗವೇ ಶಿವಯೋಗ ಎಂದು ಚಿಕ್ಕಮಗಳೂರು ಬಸವತತ್ತ್ವ ಪೀಠ ಹಾಗೂ ಶಿವಮೊಗ್ಗ ಬಸವ ಕೇಂದ್ರದ ಪೀಠಾಧ್ಯಕ್ಷರಾದ ಡಾ. ಶ್ರೀ ಬಸವ ಮರುಳಸಿದ್ಧ ಸ್ವಾಮಿಗಳವರು ಅಭಿಪ್ರಾಯಪಟ್ಟರು.

ದಿನಾಂಕ 1.11.2021ರಂದು ನಡೆದ ಜ್ಞಾನವಾರಿಧಿ-48 ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಶಿವಯೋಗದ ಮಹತ್ವ' ಕುರಿತು ಅವರು ಉಪನ್ಯಾಸ ನೀಡಿದರು. "ಯಾರು ಬೇಕಾದರೂ ಶಿವಯೋಗ ಸಾಧನೆ ಮಾಡಬಹುದು. ಇದೊಂದು ವಿಶಿಷ್ಟ ಯೋಗಪದ್ಧತಿ. ಸಾಮಾಜಿಕ ಮತ್ತು ಆಧ್ಯಾತ್ಮಿಕ ವಿಕಾಸದ ಹಾದಿ ಶಿವಯೋಗ.

ದೇವನೊಬ್ಬ ನಾಮ ಹಲವು. ಕಾಯಕ ಮತ್ತು ದಾಸೋಹ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಷ್ಟಲಿಂಗ ಸಾಧನೆಯಲ್ಲಿ ಭಕ್ತಿ ತೃಪ್ತಿಗೊಳ್ಳಬೇಕು. ಭಕ್ತಿಯ ಸಂಭಾಷಣೆಯನ್ನು ಮಾಡಬೇಕು. ಇದರಿಂದ ಶಿವತತ್ವ ಪ್ರಾಪ್ತಿಯಾಗುತ್ತದೆ" ಎಂದು ತಿಳಿಸಿದರು.

ಇಷ್ಟಲಿಂಗವೆನ್ನುವುದು ಆತ್ಮಸಾಕ್ಷಿಯ ಸ್ವರೂಪ. ಶಿವಯೋಗ ಬದುಕಿನ ಸಹಜವಾದ ನೆಲೆಗಳಲ್ಲಿ ಒಂದಾಗಬೇಕು. ಜೀವಿಯಾಗುವುದು ಸಾಧನೆಯಲ್ಲ, ಶಿವನಾಗುವುದು ಸಾಧನೆ. ಶಿವಯೋಗವು ಅಂಗವನ್ನು ಲಿಂಗವನ್ನಾಗಿ ಮಾಡುತ್ತದೆ. ತನು, ಮನ, ಭಾವಗಳಲ್ಲಿಯೂ ಇಷ್ಟಲಿಂಗ ವ್ಯಾಪಿಸಿರುತ್ತದೆ. ನಮ್ಮೊಳಗಿರುವ ಚಿತ್ಕಳೆಯನ್ನು ಭಾವವನ್ನಾಗಿ ಗ್ರಹಿಸಬೇಕು. ಲಿಂಗಾಂಗ ಸಾಮರಸ್ಯವನ್ನು ಹೊಂದಬೇಕು. ಇಷ್ಟಲಿಂಗದ ಸಮ್ಮುಖದಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು. ತಪ್ಪು-ಒಪ್ಪುಗಳನ್ನು ವಿಮರ್ಶಿಸಿಕೊಳ್ಳಬೇಕು. ಅಂತರಂಗವನ್ನು ನಿರಂತರವಾಗಿ ಚಿಂತನೆಯ ನಿಕಷಕ್ಕೆ ಒಳಪಡಿಸಿ ನಿತ್ಯವೂ ಶುದ್ಧವಾಗಿರಬೇಕು. ಎಲ್ಲವನ್ನೂ ಲಿಂಗಸ್ವರೂಪಿಯಾಗಿ ಕಾಣುವಂತೆ ಶಿವಯೋಗ ಮಾಡುತ್ತದೆ. ಸಾಧನಮುಖಿಗಳಾಗಿ ಸಾಧಕರು ಸಂಚರಿಸಬೇಕು. ಶಿವಯೋಗಸಾಧನೆಯಿಂದ ಭಿನ್ನತೆಗಳು ನಿವಾರಣೆಯಾಗುತ್ತವೆ ಎಂದರು.

ಜೆಎಸ್‌ಎಸ್ ಶಾಲಾ ವಿದ್ಯಾರ್ಥಿಗಳು ನಾಡಗೀತೆಯನ್ನು ಹಾಡುವುದರ ಮೂಲಕ ಪ್ರಾರ್ಥಿಸಿದರು. ಶ್ರೀ ಆರ್.ಎಸ್. ಕುಮಾರ್‌ರವರು ಕಾರ್ಯಕ್ರಮ ನಿರ್ವಹಿಸಿದರು. □

## ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಛಲ ಅತಿ ಮುಖ್ಯ



ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಛಲ ಅತಿ ಮುಖ್ಯ ಎಂದು ಕೇಂದ್ರ ಲೋಕಸೇವಾ ಆಯೋಗದ ನಾಗರಿಕ ಸೇವಾ ಪರೀಕ್ಷೆಯಲ್ಲಿ 130ನೇ ರ್‍ಯಾಂಕ್ ಗಳಿಸಿರುವ ಎಸ್‌ಜೆಸಿಇ ಹಿರಿಯ ವಿದ್ಯಾರ್ಥಿ ಶ್ರೀ ಎಂ. ನಿಶ್ಚಯ್ ಪ್ರಸಾದ್ ಹೇಳಿದರು.

ದಿನಾಂಕ 8.11.2021ರಂದು ನಡೆದ ಜ್ಞಾನವಾರಿಧಿ-49 ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪೂರ್ವಸಿದ್ಧತೆ' ಕುರಿತು ಉಪನ್ಯಾಸ ನೀಡುತ್ತಾ ಸ್ಪರ್ಧಾತ್ಮಕ ಪರೀಕ್ಷೆಗಳು ಎಲ್ಲ ಪರೀಕ್ಷೆಗಳಂತೆ ಇರುವುದಿಲ್ಲ. ಅಲ್ಲಿ ಕೆಲವರಿಗೆ ಮಾತ್ರ ಫಲ ದೊರೆಯುತ್ತದೆ. ಈ ಪರೀಕ್ಷೆಗಳ ಬಗ್ಗೆ ಸಾಕಷ್ಟು ಜನರಲ್ಲಿ ತಪ್ಪು ಕಲ್ಪನೆಗಳಿವೆ. ಅದನ್ನು ತೊಡೆದು ಹಾಕಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಕಷ್ಟು ಅವಕಾಶಗಳಿವೆ. ಛಲ ಎಲ್ಲದಕ್ಕೂ ಸ್ಫೂರ್ತಿಯಾಗುತ್ತದೆ ಮತ್ತು ದಾರಿಯನ್ನು ತೋರುತ್ತದೆ. ಗುರಿ ಸಾಧನೆಗೆ ನಿಖರತೆ ಇರಬೇಕು. ಸ್ಪರ್ಧೆ ಹೆಚ್ಚಾದಷ್ಟೂ ಫಲ ಜಾಸ್ತಿ. ನಾವು ಮಾಡುವ ಕೆಲಸದಲ್ಲಿ ಖುಷಿಗಿಂತ ಹೆಚ್ಚು ತೃಪ್ತಿ ಇರಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವುದರಿಂದ ವ್ಯಕ್ತಿತ್ವ ವಿಕಸನವಾಗುತ್ತದೆ ಮತ್ತು ಆತ್ಮವಿಶ್ವಾಸ ಹೆಚ್ಚುತ್ತದೆ. ಯಾವ ಸಮಯದಲ್ಲಿ ಏನನ್ನು ಮಾಡಬೇಕು ಎನ್ನುವುದು ಇಲ್ಲಿ ಬಹಳ ಮುಖ್ಯವಾಗುತ್ತದೆ. ಸಮಾಜದಲ್ಲಿ ಸುತ್ತಮುತ್ತ ನಡೆಯುತ್ತಿರುವ ಎಲ್ಲ ಘಟನೆಗಳ ಬಗ್ಗೆಯೂ ಮಾಹಿತಿ ಇರಬೇಕು. ಎಲ್ಲ ವಿಷಯಗಳ ಬಗ್ಗೆ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು, ಅದು ನಮ್ಮನ್ನು ಬಹು ಎತ್ತರಕ್ಕೆ ಕರದೊಯ್ಯುತ್ತದೆ. ಮಾನಸಿಕ ಸ್ಥೈರ್ಯದ ಜೊತೆಗೆ ದೈಹಿಕವಾಗಿಯೂ ಸದೃಢವಾಗಿರಬೇಕು. ಎಲ್ಲ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಪ್ರಯತ್ನಿಸಬೇಕು. ಸೋತರೆ ಕುಗ್ಗದೇ ಅದನ್ನು ಗೆಲುವಿನ ಮೆಟ್ಟಿಲಾಗಿಸಿಕೊಳ್ಳಬೇಕು. ಸಾಧಕರಿಗೆ ಸತತ ಪ್ರಯತ್ನ ಮತ್ತು ಅಭ್ಯಾಸ ಬಹಳ ಮುಖ್ಯ. ನಾವು ಓದಿರುವುದನ್ನು ವಿಮರ್ಶೆ ಮಾಡಬೇಕು. ಸಮಯದ ಹೊಂದಾಣಿಕೆ ಇಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ಕು. ಭಾನುಮತಿ ಮತ್ತು ಕು. ಭಾರತಿ ಪ್ರಾರ್ಥಿಸಿದರು. ಡಾ. ಪ್ರಶಾಂತ್ ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

## ಜೀವನದಲ್ಲಿ ನಡೆ ಮತ್ತು ನುಡಿ ಯಾವಾಗಲೂ ಒಂದಾಗಿರಬೇಕು



ಜೀವನದಲ್ಲಿ ನಡೆ–ನುಡಿ ಒಂದಾಗಿರಬೇಕು. ಅದು ದೊರಕುವುದು ನಮಗೆ ನೀಡುವ ಸಂಸ್ಕಾರದಿಂದ ಎಂದು ಪ್ರಖ್ಯಾತ ವಾಗ್ಮಿಗಳಾದ ಶ್ರೀ ಹಿರೇಮಗಳೂರು ಕಣ್ಣನ್‌ರವರು ಹೇಳಿದರು.

ದಿನಾಂಕ 15.11.2021 ರಂದು ನಡೆದ ಜ್ಞಾನವಾರಿಧಿ–50 ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಧಾರ್ಮಿಕ ಆಚಾರ ಜೀವಕ್ಕೆ ಸಂಸ್ಕಾರ' ವಿಷಯ ಕುರಿತು ಉಪನ್ಯಾಸ ನೀಡುತ್ತಾ ಬಹಳಷ್ಟು ಜನ ಹೇಳುವುದು ಒಂದು, ಮಾಡುವುದು ಇನ್ನೊಂದು. ನುಡಿ ಒಂದಾದರೆ ಅವರ ನಡೆ ಒಂದು ರೀತಿ ವಿಭಿನ್ನವಾಗಿರುತ್ತದೆ. ಧರ್ಮ ಎಂದರೆ ನಡೆಯುವುದು. ಸತ್ಯ ಎಂದರೆ ನುಡಿಯುವುದು. ಸತ್ಯಕ್ಕೆ ಎಂದೂ ಸಾವಿಲ್ಲ. ಧಾರ್ಮಿಕ ಆಚಾರಗಳು ಜೀವಕ್ಕೆ ಸಂಸ್ಕಾರವನ್ನು ನೀಡುತ್ತವೆ. ಸಂಸ್ಕೃತಿ ಮತ್ತು ಸಂಸ್ಕಾರಗಳು ಜೀವನದಲ್ಲಿ ಬಹಳ ಮುಖ್ಯ. ಕುವೆಂಪುರವರು ಜಗವೇ ದೇಗುಲ ಎಂದಿದ್ದಾರೆ. ಜಾತಿ, ಮತ, ಪಂಥಗಳ ಸೋಂಕಿಲ್ಲದೆ ವಚನ ಮತ್ತು ದಾಸ ಸಾಹಿತ್ಯ ಸೃಷ್ಟಿಯಾದವು. ಬದುಕಿನಲ್ಲಿ ಸಂಸ್ಕೃತಿಯಾಗಿ ತೋರಬೇಕು, ಕಲೆಯಾಗಿ ಅರಳಬೇಕು, ಸಾಹಿತ್ಯವಾಗಿ ನುಡಿಯಾಗಬೇಕು, ಜೀವನ ಮತ್ತು ಚೇತನವನ್ನು ಗೌರವಿಸಬೇಕು, ಜೀವನದಲ್ಲಿ ಜಿಗುಪ್ಸೆ ಬೇಡ ಎಂದು ಡಿವಿಜಿ ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ತಿಳಿಸಿದ್ದಾರೆ. ಶರೀರದಲ್ಲಿ ಸ್ವರ ಇದ್ದರೆ ಈಶ್ವರ. ಸ್ವರ ಆಚೆ ಹೋದರೆ ಜೀವನ ನಶ್ವರ. ಗ್ರಾಮೀಣ ಪ್ರದೇಶದ ಜನರ ನಡೆ ನುಡಿ ಯಾವಾಗಲೂ ಒಂದೇ ಆಗಿರುತ್ತದೆ. ಮುಂದುವರಿದ ನಾಗರಿಕ ಪ್ರಪಂಚದ ಜನ ಇದಕ್ಕೆ ವಿರುದ್ಧವಾಗಿದ್ದಾರೆ. ಹುಟ್ಟಿದಾಗ ಉಸಿರು ಇರುತ್ತದೆ, ಹೆಸರು ಇರುವುದಿಲ್ಲ. ಮರಣವಾದಾಗ ಹೆಸರು ಇರುತ್ತದೆ, ಉಸಿರು ಇರುವುದಿಲ್ಲ. ಸಂಸ್ಕೃತಿಯ ಬೀಡು ಕನ್ನಡ ನಾಡು. ಅದನ್ನು ಆಸ್ವಾದಿಸಬೇಕು, ಆಗ ಜೀವನದಲ್ಲಿ ಸಾಮರಸ್ಯ ಮೂಡುತ್ತದೆ. ನಾವುಗಳೆಲ್ಲ ಗ್ರಹ; ದೇವರು ವಿಗ್ರಹ; ಅವನ ಮುಂದೆ ಮಾಡಬೇಕು ಮನೋನಿಗ್ರಹ. ಧಾರ್ಮಿಕ ಆಚಾರಕ್ಕೆ ಕನ್ನಡ ಸಾಹಿತ್ಯ ಅಪಾರವಾದ ಕೊಡುಗೆಯನ್ನು ನೀಡಿದೆ. ಜನಪದರು ಸಂಸ್ಕೃತಿ ಮತ್ತು ಸಂಸ್ಕಾರಕ್ಕೆ ಬಹಳ ಮಹತ್ವದ ಸ್ಥಾನ ಕೊಟ್ಟಿದ್ದರು. ಜಾನಪದ ಜ್ಞಾನಪದವಾಯಿತು. ಆಸೆ ಆಗಸದಷ್ಟು, ಸಾಧನೆ ಮಾತ್ರ ಮುಷ್ಟಿಯಷ್ಟು ಅಂತಾಗಬಾರದು. ಜೀವನದಲ್ಲಿ ಸರಳತೆಯನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಡಾ. ಮಹೇಂದ್ರಮೂರ್ತಿ ದೇವನೂರು ಕಾರ್ಯಕ್ರಮ ನಿರ್ವಹಿಸಿದರು.

□

## ಸಂತಸದ ಜೀವನ ನಡೆಸುವ ಮನೋಭಾವ ರೂಢಿಸಿಕೊಳ್ಳಬೇಕು



ಸಂತಸದ ಜೀವನ ನಡೆಸುವ ಮನೋಭಾವ ರೂಢಿಸಿಕೊಳ್ಳಬೇಕು ಎಂದು ಖ್ಯಾತ ಲೇಖಕರು ಹಾಗೂ ಅಂಕಣಕಾರರಾದ ಪ್ರೊ. ಪ್ರೇಮಶೇಖರರವರು ಹೇಳಿದರು.

ದಿನಾಂಕ 22.11.2021 ರಂದು ನಡೆದ ಜ್ಞಾನವಾರಿಧಿ–51 ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಮನಸ್ಸು ಒಂದು ಮಹಾಶಕ್ತಿ' ವಿಷಯ ಕುರಿತು ಉಪನ್ಯಾಸ

ನೀಡುತ್ತಾ ಮನಸ್ಸಿಗೆ ಯಾವುದೇ ಮಿತಿಯಿಲ್ಲ. ಮನಸ್ಸು ಸುಸ್ಥಿತಿಯಲ್ಲಿರಬೇಕಾದರೆ ಮೆದುಳಿನ ಸಮನ್ವಯ ಇರಬೇಕಾಗುತ್ತದೆ. ಮನಸ್ಸನ್ನು ಹರಿಯಬಿಡಬಾರದು ಮತ್ತು ವಾಸ್ತವಕ್ಕೆ ವಿರುದ್ಧವಾಗಿ ನಡೆಯಲು ಬಿಡಬಾರದು. ಮನಸ್ಸಿನ ಆಧಾರದ ಮೇಲೆ ನಮ್ಮ ವರ್ತನೆ ವಿವೇಕದಲ್ಲಿರುತ್ತದೆ. ಮೆದುಳು ಮನಸ್ಸನ್ನು ನಿಯಂತ್ರಿಸುವಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ.

ಮೆದುಳು ಎಲ್ಲರಲ್ಲೂ ಒಂದೇ ತೆರನಾಗಿರುತ್ತದೆ. ಆದರೆ ಆಲೋಚನೆಗಳು ಭಿನ್ನವಾಗಿರುತ್ತವೆ. ಮನಸ್ಸು ತಾಯಿ ಗರ್ಭದಲ್ಲಿ ಇದ್ದಾಗಲೇ ರೂಪಗೊಳ್ಳಲು ಆರಂಭವಾಗುತ್ತದೆ. ಮೆದುಳು ಕೆಲಸ ಮಾಡಲು ಆರಂಭ ಮಾಡಿದರೆ ಮನಸ್ಸು ಸೃಷ್ಟಿಯಾದಂತೆ. ಸುಪ್ತ ಮನಸ್ಸು ಯಾವಾಗಲೂ ಜಾಗೃತವಾಗಿರುತ್ತದೆ. ಮನಸ್ಸಿನ ಮೇಲೆ ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಇರುವುದರಲ್ಲೇ ತೃಪ್ತಿಪಟ್ಟುಕೊಂಡು ಜೀವನ ನಡೆಸಬೇಕು. ಸಿಗಲಾರದದರ ಬಗ್ಗೆ ಯೋಚಿಸಬಾರದು. ನಾವು ರೂಢಿಸಿಕೊಂಡಿರುವ ಅಭ್ಯಾಸಗಳ ಮೇಲೆ ಜೀವನದ ಸಂತೋಷ ನಿರ್ಧಾರವಾಗುತ್ತದೆ. ಬಾಲ್ಯದಿಂದ ಇದುವರೆಗಿನ ಆಲೋಚನೆಗಳ ಒಟ್ಟು ಮೊತ್ತವೇ ಜೀವನ. ಬದುಕಿನಲ್ಲಿ ಆಶಾವಾದಿಗಳಾಗಿರಬೇಕು. ತಕ್ಷಣಕ್ಕೆ ಯಾರೂ ತಮ್ಮ ಆಲೋಚನೆಗಳನ್ನು ಬದಲಿಸಿಕೊಳ್ಳಲು ಸಾಧ್ಯವಿಲ್ಲ. ಆಲೋಚನೆಗಳು ಬದಲಾದರು ಭಾವನೆಗಳು ಬೇಗ ಬದಲಾಗುವುದಿಲ್ಲ. ಆಲೋಚನೆಗಳು ಮನಸ್ಸಿನ ಭಾಷೆ. ಭಾವನೆಗಳು ದೇಹದ ಭಾಷೆ. ನಕಾರಾತ್ಮಕ ಚಿಂತನೆಗಳು ಬದುಕನ್ನು ನಿಯಂತ್ರಣ ತಪ್ಪಿಸಿಬಿಡುತ್ತವೆ. ಇದನ್ನು ತೊಡೆದು ಹಾಕುವವರು ಆಲೋಚನೆಗಳನ್ನು ಬದಲಿಸುವ ಶಕ್ತಿಯನ್ನು ಹೊಂದಿರುತ್ತಾರೆ ಎಂದು ತಿಳಿಸಿದರು.

ಶ್ರೀಮತಿ ಸುಮಂಗಲ ಜಂಗಮಶೆಟ್ಟಿ ಪ್ರಾರ್ಥಿಸಿದರು. ಡಾ. ಹೊನ್ನೇಗೌಡ ಕಾರ್ಯಕ್ರಮ ನಿರ್ವಹಿಸಿದರು.

□

## ಪ್ರಕೃತಿಯಲ್ಲಿ ಬದುಕಲು ಯೋಗ್ಯತೆ ಇರಬೇಕು



ಪ್ರಕೃತಿಯಲ್ಲಿ ಬದುಕಲು ಯೋಗ್ಯತೆ ಇರಬೇಕು. ಆದರೆ ಮನುಷ್ಯ ಅದನ್ನು ಗಳಿಸುವಲ್ಲಿ ವಿಫಲನಾಗುತ್ತಿದ್ದಾನೆ ಎಂದು ವಿರಾಜಪೇಟೆಯ ಖ್ಯಾತ ವೈದ್ಯರಾದ ಡಾ. ಎಸ್.ವಿ. ನರಸಿಂಹನ್‌ರವರು ಹೇಳಿದರು.

ದಿನಾಂಕ 29.11.2021 ರಂದು ನಡೆದ ಜ್ಞಾನವಾರಿಧಿ–52 ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ 'ಜೀವ ವೈವಿಧ್ಯತೆ ಮತ್ತು ಭಾರತೀಯ ಸಂಸ್ಕೃತಿ' ವಿಷಯ ಕುರಿತು ಉಪನ್ಯಾಸ ನೀಡುತ್ತಾ ಪ್ರಕೃತಿಯಲ್ಲಿ ಸಮತೋಲನ ಬಹಳ ಮುಖ್ಯ. ಅದರಲ್ಲಿನ ಆಹಾರ ಸರಪಳಿಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ವಿನಾಶ ಕಟ್ಟಿಟ್ಟ ಬುತ್ತಿ. ಅದು ಪರಿಸರದ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತದೆ. ಇಲ್ಲಿ ಒಂದು ಜೀವಿಯು ಇನ್ನೊಂದು ಜೀವಿಯನ್ನು ಅವಲಂಬಿಸಿರುತ್ತದೆ, ಇದು ಪ್ರಕೃತಿಯ ನಿಯಮ. ಜೀವಿಗಳು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುತ್ತವೆ. ಚಿಕ್ಕ ಜೀವಿಯಿಂದ ಹಿಡಿದು ದೊಡ್ಡ ಜೀವಿಗಳವರೆಗೂ ಪ್ರಕೃತಿಗೆ ಎಲ್ಲವೂ ಅನಿವಾರ್ಯ. ನಾವು ಇಲ್ಲಿ ಇರುವುದು ಅನಿವಾರ್ಯ ಎನ್ನುವುದನ್ನೂ ಪ್ರಕೃತಿಗೆ ಮನವರಿಕೆ ಮಾಡಬೇಕು. ಪ್ರಕೃತಿಗೆ ಮಾನವನ ಕೊಡುಗೆ ಶೂನ್ಯ. ಭಾರತೀಯರು ಪ್ರಕೃತಿಯಲ್ಲಿ ನಂಬಿಕೆಯಿಟ್ಟವರು. ದೈವೀ ಸ್ವರೂಪದಲ್ಲಿ ಪೂಜಿಸಲಾಗುತ್ತದೆ. ಜೀವ ವೈವಿಧ್ಯತೆ ವ್ಯವಸ್ಥೆಯನ್ನು ಭಾರತೀಯರು ತಮ್ಮ ಸಾಮಾಜಿಕ ಜೀವನಕ್ಕೆ ಅಳವಡಿಸಿಕೊಂಡಿದ್ದಾರೆ. ನಮ್ಮಲ್ಲಿ ಎಲ್ಲ ಜೀವಿಗಳಿಗೂ ದೈವತ್ವದ ಸ್ಥಾನವನ್ನು ನೀಡಲಾಗಿದೆ. ಇದು ಭಾರತೀಯ ಸಂಸ್ಕೃತಿಯ ಪ್ರತೀಕ ಎಂದು ತಿಳಿಸಿದರು.

ಶ್ರೀಮತಿ ರೂಪ ಗುರುಪ್ರಸಾದ್ ಪ್ರಾರ್ಥಿಸಿದರು. ಶ್ರೀ ಕುಮಾರಸ್ವಾಮಿ ವಿರಕ್ತಮಠ ಕಾರ್ಯಕ್ರಮ ನಿರ್ವಹಿಸಿದರು.

## ಶಿವಾನುಭವ ದಾಸೋಹ

### ಸಮಗ್ರ ವಚನ ಸಾಹಿತ್ಯ ಹೊರತಂದ ಕೀರ್ತಿ ಫ.ಗು. ಹಳಕಟ್ಟಿಯವರಿಗೆ ಸಲ್ಲಬೇಕು



ಸಮಗ್ರ ವಚನ ಸಾಹಿತ್ಯವನ್ನು ಹೊರತಂದ ಕೀರ್ತಿ ಫ.ಗು. ಹಳಕಟ್ಟಿಯವರಿಗೆ ಸಲ್ಲಬೇಕು ಎಂದು ತುಮಕೂರಿನ ಆಯುರ್ವೇದ ವೈದ್ಯರು ಹಾಗೂ ಸಾಹಿತಿಗಳಾದ ಡಾ. ಬಿ. ನಂಜುಂಡಸ್ವಾಮಿಯವರು ಹೇಳಿದರು.

ದಿನಾಂಕ 27.11.2021ರಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ನಡೆದ 283ನೇ 'ಶಿವಾನುಭವ ದಾಸೋಹ' ಡಿಜಿಟಲ್ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಬಸವಾದಿ ಶರಣರ ವಚನಗಳು ಎಲ್ಲ ಭಾಷೆಗಳಿಗೆ ಅನುವಾದವಾಗಿದ್ದರೆ ವಿಶ್ವಸಾಹಿತ್ಯವಾಗುತ್ತಿತ್ತು. ವಚನ ಸಾಹಿತ್ಯವನ್ನು ಸಮಗ್ರವಾಗಿ ಹೊರತಂದ ಕೀರ್ತಿ ಡಾ. ಫ.ಗು. ಹಳಕಟ್ಟಿಯವರಿಗೆ ಸಲ್ಲುತ್ತದೆ. ವಿಜಯನಗರದ ನೂರೊಂದು ವಿರಕ್ತರಿಂದ ವಚನ ಸಾಹಿತ್ಯ ಬೆಳಕಿಗೆ ಬಂತು. ನಂತರ ಯಡಿಯೂರು ಸಿದ್ಧಲಿಂಗೇಶ್ವರರಿಂದ ವಚನ ಸಾಹಿತ್ಯ ಮರುಜೀವ ಪಡೆಯಿತು. ಮೊದಲಿಗೆ ಗುಬ್ಬಿ ಮಲ್ಲಣ್ಣಾರ್ಯ ಗಣ ಭಾಷಾರತ್ನಮಾಲ ಕೃತಿ ಮೂಲಕ 440 ವಚನಗಳನ್ನು ಪ್ರಕಟಿಸುತ್ತಾರೆ. ರಾಜ್ಯದಲ್ಲಿ 1850ರ ನಂತರ ಮುದ್ರಣ ಕಾರ್ಯ ಆರಂಭವಾಯಿತು. ಅಖಂಡೇಶ್ವರ ವಚನಗಳು 1882ರಲ್ಲಿ ಪ್ರಕಟವಾಯಿತು. ಮರಿಶಂಕರದೇವರ ಬಸವಣ್ಣನವರ ಷಟ್‌ಸ್ಥಲ ವಚನಗಳನ್ನು 1886ರಲ್ಲಿ ಪ್ರಕಟಿಸಲಾಯಿತು. ಬಸವಲಿಂಗಶಾಸ್ತ್ರಿಯವರ ಸಂಪಾದಕತ್ವದಲ್ಲಿ ಘನಲಿಂಗದೇವರ ವಚನಗಳನ್ನು 1907ರಲ್ಲಿ ಪ್ರಕಟಿಸಲಾಗಿದೆ. 1913ರಲ್ಲಿ ಬಸವ ಜಯಂತಿಯನ್ನು ಮೊಟ್ಟಮೊದಲನೆಯದಾಗಿ ಹರ್ಡೇಕರ್ ಮಂಜಪ್ಪ ಮತ್ತಿತರ ನೇತೃತ್ವದಲ್ಲಿ ಆಚರಿಸಲಾಯಿತು. ಅಲ್ಲಿಂದ ಈಚೆಗೆ ಬಸವಾದಿ ಶರಣರತತ್ವ ಆಚಾರಗಳನ್ನು ಪ್ರತಿಪಾದಿಸಿಕೊಂಡು ಬರಲಾಗುತ್ತಿದೆ.

1924ರ ಬೆಳಗಾವಿ ಅಧಿವೇಶನದಲ್ಲಿ ಮಹಾತ್ಮ ಗಾಂಧಿಯವರು ಬಸವಾದಿ ಶರಣರ ಆದರ್ಶಗಳನ್ನು ಸ್ಮರಿಸುತ್ತಾರೆ. ನಂತರದ ದಿನಗಳಲ್ಲಿ ಮಠಮಾನ್ಯಗಳು ಸಂಘ–ಸಂಸ್ಥೆಗಳು ಬಸವಾದಿ ಶರಣರ ವಚನ ಸಾಹಿತ್ಯವನ್ನು ಪ್ರಸಾರ ಮಾಡುತ್ತಾ ಬಂದಿವೆ. ಸಮಗ್ರ ವಚನ ಸಾಹಿತ್ಯ ಸಂಪುಟಗಳನ್ನು ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟಿಸುತ್ತಾ ಬಂದಿದೆ. ಹಿಂದಿನ ಹಾಗೂ ಇಂದಿನ ಪತ್ರಿಕೆಗಳು ವಚನ ಸಾಹಿತ್ಯ ಪ್ರಕಟಣೆಗೆ ನೆರವಾಗಿವೆ. ವಚನ ಸಾಹಿತ್ಯದಂತೆ ನಡೆ–ನುಡಿಯಲ್ಲಿ ನಾವು–ನೀವೆಲ್ಲರೂ ನಡೆಯಬೇಕಾಗಿದೆ ಎಂದು ತಿಳಿಸಿದರು.

ಶ್ರೀಮತಿ ಸುಧಾರವರು ಪ್ರಾರ್ಥಿಸಿದರು. ಡಾ. ಮಧುಸೂದನ್‌ರವರು ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಜಿಜ್ಞಾಸುಗಳು, ಸಾರ್ವಜನಿಕರು ಭಾಗವಹಿಸಿದ್ದರು.

□

### ಪೋಕ್ಸೋ ಕಾಯ್ದೆ ಬಗ್ಗೆ ಜಾಗೃತಿ ಮೂಡಿಸಬೇಕಿದೆ

ದೇಶ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಆದರೆ ದೌರ್ಜನ್ಯಗಳು ನಿಂತಿಲ್ಲ. ಲೈಂಗಿಕ ದೌರ್ಜನ್ಯ ಪ್ರಕರಣಗಳು ನಿರಂತರವಾಗಿ ವರದಿಯಾಗುತ್ತಿವೆ. ಈ ಪೈಕಿ ಮಕ್ಕಳ ಮೇಲೂ ಅದೇ ರೀತಿಯ ಲೈಂಗಿಕ ದೌರ್ಜನ್ಯಗಳು ನಡೆಯುತ್ತಿವೆ. ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಪ್ರಕರಣಗಳ ಬಗ್ಗೆ ಗಮನ ಹರಿಸುವ ಪೋಕ್ಸೋ




ಶ್ರೀ ಸಂತೋಷ ಕೊಠಾರಿಯವರು ಪೋಕ್ಸೋ ಕಾಯ್ದೆ ಬಗ್ಗೆ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸುತ್ತಿರುವುದು. ಚಿತ್ರದಲ್ಲಿ ಶ್ರೀಮತಿ ಭ್ರಮರಾಂಬ, ಶ್ರೀ ನಾಗರಾಜು, ಶ್ರೀಮತಿ ನಿರ್ಮಲ ಮಧುಸೂದನ್, ಶ್ರೀ ಎಂ. ಆನಂದರವರನ್ನು ಕಾಣಬಹುದು

ಕಾಯಿದೆ ಬಗ್ಗೆ ಮಕ್ಕಳು, ಪೋಷಕರು, ಶಿಕ್ಷಕರು ಸೇರಿ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕಿದೆ ಮತ್ತು ಜಾಗೃತಿ ಮೂಡಿಸಬೇಕಿದೆ ಎಂದು ಕೊಳ್ಳೇಗಾಲದ ಗೌರವಾನ್ವಿತ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಶ್ರೀ ಎಂ. ಆನಂದರವರು ತಿಳಿಸಿದರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 9.11.2021 ಹಿರಿಯ ವಿದ್ಯಾರ್ಥಿ ವೇದಿಕೆ, ತಾಲ್ಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಹಾಗೂ ಯೂತ್ ರೆಡ್ ಕ್ರಾಸ್ ಘಟಕಗಳ ಸಹಯೋಗ ದೊಂದಿಗೆ 75ನೇ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವ ಅಂಗವಾಗಿ ಆಯೋಜಿಸಿದ್ದ 'ಪೋಕ್ಸೋ ಕಾಯ್ದೆ ಬಗ್ಗೆ ಕಾನೂನು ಅರಿವು' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪೋಕ್ಸೋ ಕಾಯ್ದೆಯಡಿಯಲ್ಲಿ ಬರುವ ಕೃತ್ಯವಾಗಿದ್ದು ಪೋಷಕರು, ವೈದ್ಯರು, ಶಾಲಾ ಸಿಬ್ಬಂದಿ ಅಥವಾ ಸ್ವತಃ ಮಗು ಅಥವಾ ಯಾರಾದರೂ ದೂರು ಸಲ್ಲಿಸಬಹುದಾಗಿದೆ. ದೂರು ಸಲ್ಲಿಸಲು ಸಮಯ ಮಿತಿ ಇರುವುದಿಲ್ಲ. ಬಾಲ್ಯದಲ್ಲಿ ಎದುರಿಸಿದ ಲೈಂಗಿಕ ಕಿರುಕುಳದ ಬಗ್ಗೆ ಯಾವುದೇ ವಯಸ್ಸಿನಲ್ಲಿ ದೂರು ನೀಡಬಹುದಾಗಿದೆ. ಅಪ್ರಾಪ್ತರ ಮೇಲೆ ಲೈಂಗಿಕ ದೌರ್ಜನ್ಯ ಎಸಗುವವರಿಗೆ ಮರಣ ದಂಡನೆ ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸಿ ಪೋಕ್ಸೋ ಕಾಯಿದೆಗೆ ತಿದ್ದುಪಡಿ ತರಲಾಗಿದ್ದು ಈ ಬಗ್ಗೆ ವಯಸ್ಕರಲ್ಲಿ ಜಾಗೃತಿ ಮೂಡಿಸುವ ಕಾರ್ಯ ನಡೆಯಬೇಕಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಭ್ರಮರಾಂಬರವರು ಭಾರತವು ವಿಶ್ವದ ಅತಿ ಹೆಚ್ಚು ಮಕ್ಕಳ ಜನಸಂಖ್ಯೆ ಹೊಂದಿದೆ. ದೇಶದಲ್ಲಿ ಮಕ್ಕಳ ರಕ್ಷಣೆಯನ್ನು ಭಾರತೀಯ ಸಂವಿಧಾನದ 21ನೇ ಪರಿಚ್ಛೇದದಲ್ಲಿ ಭಾರತೀಯ ನಾಗರಿಕರಿಗೆ ಖಾತರಿ ಪಡಿಸಲಾಗಿದೆ. ಕಾನೂನು ಅರಿವು ಜೊತೆಗೆ ಪಾಲನೆ ಬಗ್ಗೆ ಕಾರ್ಯಕ್ರಮಗಳ ಅಗತ್ಯವಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಕೊಳ್ಳೇಗಾಲದ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಶ್ರೀ ಸಂತೋಷ ಕೊಠಾರಿ, ವಕೀಲರ ಸಂಘದ ಅಧ್ಯಕ್ಷರಾದ ಶ್ರೀ ಪಿ. ಮಹದೇವ, ಹಿರಿಯ ವಕೀಲರಾದ ಶ್ರೀ ಎಸ್. ನಾಗರಾಜು, ಶ್ರೀಮತಿ ನಿರ್ಮಲ ಮಧುಸೂದನ್, ಶ್ರೀ ಡಿ. ಕೆಂಪಯ್ಯ, ಶ್ರೀ ಮಲ್ಲಿಕಾರ್ಜುನ ಹಾಗೂ ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಕೋಳಿ ಸಾಕಾಣಿಕೆಯಿಂದ ಅಪೌಷ್ಟಿಕತೆ ನಿವಾರಣೆ ಮತ್ತು ಹೆಚ್ಚಿನ ಆದಾಯ

ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಕೆ.ಆರ್. ನಗರ ತಾಲ್ಲೂಕಿನ ಅರಕೆರೆ ಗ್ರಾಮದ ರೈತರಿಗೆ ಹಿತ್ತಲಿನಲ್ಲಿ ಕೋಳಿ ಸಾಕಾಣಿಕೆ ಮಾಡುವ ಬಗ್ಗೆ ಮತ್ತು ಅಪೌಷ್ಟಿಕತೆ ನಿವಾರಣೆಯಲ್ಲಿ ಕೋಳಿ ಮಾಂಸ ಹಾಗೂ ಮೊಟ್ಟೆಯ ಪಾತ್ರದ ಬಗ್ಗೆ ತರಬೇತಿ ನೀಡಲಾಯಿತು.

ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಪಶು ವಿಜ್ಞಾನಿಗಳಾದ ಡಾ. ರಕ್ಷಿತ್ ರಾಜ್ ಮಾತನಾಡಿ ಹಿತ್ತಲಿನಲ್ಲಿ ಕೋಳಿ ಸಾಕಾಣಿಕೆ ಮಾಡುವುದರಿಂದ ಆರೋಗ್ಯ ಉತ್ತಮ ಪಡಿಸಿಕೊಳ್ಳಬಹುದು ಮತ್ತು ರೈತರು ಹೆಚ್ಚಿನ ಆದಾಯ ಗಳಿಸಬಹುದು. ಭಾರತೀಯ ವೈದ್ಯಕೀಯ ಅಧ್ಯಯನ ಸಂಸ್ಥೆಯ ಪ್ರಕಾರ, ಪ್ರತಿ ವರ್ಷ ಒಬ್ಬ ವ್ಯಕ್ತಿ ಕನಿಷ್ಠ 180 ಮೊಟ್ಟೆ ಮತ್ತು 10.95 ಕೆಜಿ ಮಾಂಸ ಸೇವಿಸಬೇಕು. ಒಂದು ಮೊಟ್ಟೆಯಿಂದ 6.4 ಗ್ರಾಂ. ಮತ್ತು ನೂರು ಗ್ರಾಂ. ಕೋಳಿ ಮಾಂಸದಿಂದ 27 ಗ್ರಾಂ. ಪ್ರೋಟಿನ್ ದೊರಕುತ್ತದೆ. ಜೊತೆಗೆ ಕೋಳಿ ಮಾಂಸದಲ್ಲಿ ಕೊಬ್ಬಿನಾಂಶ ಕಡಿಮೆಯಿರುವುದರಿಂದ ಎಲ್ಲಾ ವಯಸ್ಕರು ಸೇವಿಸಬಹುದು ಮತ್ತು ಅಪೌಷ್ಟಿಕತೆ ನಿವಾರಿಸಿಕೊಳ್ಳಬಹುದು. ಇಂದು ಮಾರುಕಟ್ಟೆಯಲ್ಲಿ 1 ಕೆಜಿ ನಾಟಿ ಕೋಳಿ ಮಾಂಸಕ್ಕೆ ಸುಮಾರು 200 ರಿಂದ 250 ರೂ. ಬೆಲೆ ಇದೆ. ಹಾಗೆಯೇ 1 ನಾಟಿ ಕೋಳಿ ಮೊಟ್ಟೆಯ ದರ ಕನಿಷ್ಟ 10 ರೂ.ಗಳು. ಭಾರತೀಯ ಕೃಷಿ ಅನುಸಂಧಾನ ಸಂಸ್ಥೆಯವರು ಹಿತ್ತಲಿನಲ್ಲಿ ಸಾಕಬಹುದಾದ ಹಲವಾರು ಕೋಳಿ ತಳಿಗಳನ್ನು ಅಭಿವೃದ್ಧಿ ಪಡಿಸಿರುತ್ತಾರೆ. ಪ್ರಮುಖವಾಗಿ ನಮ್ಮ ಭಾಗಕ್ಕೆ ಹೊಂದುವಂತಹ ಸ್ವರ್ಣಧಾರ ಮೊಟ್ಟೆ ಕೋಳಿಗಳನ್ನು ಅಭಿವೃದ್ಧಿಪಡಿಸಿದ್ದು, ಬೆಂಗಳೂರು ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಸ್ವರ್ಣಧಾರ ಕೋಳಿ ತಳಿಗಳು ಲಭ್ಯವಿರುತ್ತದೆ. ಈ ತಳಿಯ ಕೋಳಿಗಳು ಸುಮಾರು 160 ರಿಂದ 170 ಮೊಟ್ಟೆಗಳನ್ನು ವಾರ್ಷಿಕವಾಗಿ ಇಡುತ್ತವೆ ಮತ್ತು 8 ವಾರಗಳಿಗೆ 1 ರಿಂದ 1.2 ಕೆಜಿ ತೂಕಕ್ಕೆ ಬರುತ್ತವೆ. ಆದ್ದರಿಂದ ರೈತರು ಹಿತ್ತಲಿನಲ್ಲಿ ಕೋಳಿ ಸಾಕಾಣಿಕೆಯನ್ನು ಪ್ರಾರಂಭ ಮಾಡಿ ಉದ್ಯಮವಾಗಿ ರೂಢಿಸಿಕೊಂಡು ಆರ್ಥಿಕವಾಗಿ ಪ್ರಗತಿ ಸಾಧಿಸಬೇಕೆಂದು ತಿಳಿಸಿದರು.

ಹಿತ್ತಲಿನಲ್ಲಿ ಕೋಳಿ ಸಾಕಾಣಿಕೆ ಮಾಡಲು ಮತ್ತು ರೈತ ಮಹಿಳೆಯರಿಗೆ ಪ್ರೋತ್ಸಾಹ ನೀಡಲು ಸುಮಾರು 30 ಮಹಿಳೆಯರಿಗೆ ತಲಾ 2 ಕೋಳಿ ಮರಿಗಳನ್ನು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ನೀಡಲಾಯಿತು. ಕಾರ್ಯಕ್ರಮದಲ್ಲಿ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾ, ಗೃಹ ವಿಜ್ಞಾನಿ ಶ್ರೀಮತಿ ನೇತ್ರಾವತಿ ಎತ್ತಿನಮನಿ ಮತ್ತು ಅರಕೆರೆ ಗ್ರಾಮದ ರೈತರು ಭಾಗವಹಿಸಿದ್ದರು.

## ಆರಕ್ಷಕರಿಗೆ ಆರೋಗ್ಯ ತಪಾಸಣಾ ಶಿಬಿರ

ವಿಶ್ವ ಆರೋಗ್ಯ ಸಂಸ್ಥೆಯು ಪ್ರತಿವರ್ಷ ನವೆಂಬರ್ 14 ಅನ್ನು ವಿಶ್ವ ಮಧುಮೇಹ ದಿನಾಚರಣೆಯನ್ನಾಗಿ ಘೋಷಿಸಿದೆ. ಇದರ ಅಂಗವಾಗಿ ದಿನಾಂಕ 18.11.2021ರಂದು ಮೈಸೂರಿನ ಜೆಎಸ್‌ಎಸ್ ನರ್ಸಿಂಗ್ ಶಾಲಾ ವತಿಯಿಂದ ಕೆಎಸ್‌ಆರ್‌ಪಿ ಐದನೇ ಪಡೆ ಜಾಕಿ ಕ್ವಾಟ್ರಸ್‌ನಲ್ಲಿ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.

ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿಯವರು ಮಾತನಾಡಿ ಈ ವರ್ಷದ ಘೋಷಣಾ ವಾಕ್ಯವಾದ ಮಧುಮೇಹ ಆರೈಕೆಗೆ ಅವಕಾಶ ಈಗಲ್ಲವಾದರೆ ಮತ್ತೆ ಯಾವಾಗ? ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ನಂತರ ಮಧುಮೇಹ ರೋಗದ ಗುಣಲಕ್ಷಣಗಳು, ಆರೈಕೆ, ಜೀವನಶೈಲಿಯಲ್ಲಿ ಬದಲಾವಣೆ, ಆಹಾರ ಕ್ರಮಗಳ ಬಗ್ಗೆ ತಿಳಿಸಿ ನಿಯಮಿತವಾದ ವ್ಯಾಯಾಮ, ಕಾಲ ಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಮಾಂಡೆಂಟ್ ಶ್ರೀ ಆರ್. ಜನಾರ್ಧನ್‌ರವರು ಮಧುಮೇಹ ರೋಗದಿಂದಾಗುವ ದುಷ್ಪರಿಣಾಮಗಳನ್ನು ವಿವರಿಸುತ್ತಾ ಸರ್ಕಾರದಿಂದ ಆಯೋಜಿಸಲಾಗಿರುವ ಆರೋಗ್ಯ ತಪಾಸಣಾ ಸೌಲಭ್ಯಗಳನ್ನು ಎಲ್ಲರೂ ಸದುಪಯೋಗಪಡಿಸಿಕೊಂಡು



ಆರೋಗ್ಯ ತಪಾಸಣಾ ಶಿಬಿರವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ಕೆಎಸ್‌ಆರ್‌ಪಿ ಐದನೇ ಪಡೆ ಕಮಾಂಡೆಂಟ್ ಶ್ರೀ ಆರ್. ಜನಾರ್ಧನ್, ಶ್ರೀಮತಿ ಕೆ.ವಿ. ಮಂಜುಳ, ಶ್ರೀಮತಿ ಡಿ.ಎನ್. ರೇಣುಕಾದೇವಿ ಹಾಗು ಶ್ರೀ ರಾಜು ಲಂಗೋಟಿರವರನ್ನು ಕಾಣಬಹುದು

ಮುಂದೆ ಆಗುವಂತಹ ಅನಾನುಕೂಲಗಳನ್ನು ತಡೆಗಟ್ಟಬೇಕು ಹಾಗು ಕಾಲ ಕಾಲಕ್ಕೆ ವೈದ್ಯಕೀಯ ತಪಾಸಣೆ ಮಾಡಿಸಿಕೊಂಡು ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕೆಂದು ತಿಳಿಸಿದರು.

ಒಟ್ಟು 108 ಆರಕ್ಷಕ ಸಿಬ್ಬಂದಿಗಳು ಆರೋಗ್ಯ ತಪಾಸಣಾ ಶಿಬಿರದ ಸದುಪಯೋಗ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಅಸಿಸ್ಟೆಂಟ್ ಕಮಾಂಡೆಂಟ್‌ರಾದ ಶ್ರೀ ರಾಜು ಲಂಗೋಟಿ ಮತ್ತು ಶ್ರೀ ಎಸ್. ಮಹದೇವಸ್ವಾಮಿ, ಜೆಎಸ್‌ಎಸ್ ಆಸ್ಪತ್ರೆಯ ವೈದ್ಯರುಗಳಾದ ಡಾ. ನಿತಿನ್ ಸಾಯಿ, ಡಾ. ಪಾರ್ವತಿ, ಡಾ. ರಾಕಿ, ನರ್ಸಿಂಗ್ ಶಾಲೆಯ ಟ್ಯೂಟರ್‌ರಾದ ಶ್ರೀಮತಿ ಹೆಚ್.ಎಸ್. ಮಾನಸ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಜೆಎಸ್‌ಎಸ್ ವೃದ್ಧಾಶ್ರಮದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಕಾಯಚಿಕಿತ್ಸಾ ವಿಭಾಗದ ವತಿಯಿಂದ ವಿಶ್ವ ಮಾನಸಿಕ ಆರೋಗ್ಯ ದಿನದ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ವೃದ್ಧಾಶ್ರಮದಲ್ಲಿ ದಿನಾಂಕ 30.10.2021 ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾಯಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ. ಎಂ.ಡಿ. ಬೀನಾ ಹಾಗೂ ಪ್ರಾಧ್ಯಾಪಕರಾದ ಡಾ. ದೀಪಾ ಸಿ. ಪಾಟೀಲ್‌ರವರುಗಳು ಹಿರಿಯ ನಾಗರಿಕರನ್ನು ಉದ್ದೇಶಿಸಿ ಒತ್ತಡರಹಿತ ಜೀವನವನ್ನು ನಡೆಸುವುದು ಹೇಗೆ ಮತ್ತು ಅದರಿಂದ ಹೊರಬರುವ ಬಗೆಯನ್ನು ತಿಳಿಸಿಕೊಟ್ಟರು. ಎಲ್ಲರಿಗೂ ಆರೋಗ್ಯ ತಪಾಸಣೆ ಮಾಡಿ ಔಷಧಿಯನ್ನು ವಿತರಿಸಲಾಯಿತು. ಆರೋಗ್ಯ ತಪಾಸಣೆ ನಂತರ ವಿದ್ಯಾರ್ಥಿಗಳು ಮತ್ತು ಹಿರಿಯ ನಾಗರಿಕರು ಕೂಡಿ ಆಟ, ಭಜನೆ ಮತ್ತು ಇನ್ನಿತರ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡು ಶಿಬಿರವನ್ನು ಯಶಸ್ವಿಗೊಳಿಸಿದರು.



ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಕಾಯಚಿಕಿತ್ಸಾ ವಿಭಾಗದ ವತಿಯಿಂದ ವಿಶ್ವ ಮಾನಸಿಕ ಆರೋಗ್ಯ ದಿನದ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ವೃದ್ಧಾಶ್ರಮದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರ

ಜೆಎಸ್‌ಎಸ್ ವೃದ್ಧಾಶ್ರಮದ ಸಂಯೋಜಕರಾದ ಡಾ. ಓಂಪ್ರಕಾಶ್ ಮತ್ತು ಶ್ರೀ ಬಸವಣ್ಣ ಉಪಸ್ಥಿತರಿದ್ದರು.

## ಜೆಎಸ್‌ಎಸ್ ಕಾಲೇಜಿನಲ್ಲಿ ಸಂವಿಧಾನ ಕುರಿತ ಸೂತ್ರಧಾರ ನಾಟಕ ಪ್ರದರ್ಶನ



ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಮೈಸೂರಿನ ರಂಗಾಯಣದ ವತಿಯಿಂದ ವಿದ್ಯಾರ್ಥಿಗಳಿಗಾಗಿ ಶ್ರೀ ಎಸ್. ರಾಮನಾಥ್ ರಚಿಸಿರುವ 'ಸೂತ್ರಧಾರ' ನಾಟಕವನ್ನು ಪ್ರದರ್ಶಿಸಲಾಯಿತು.

ನಾಟಕ ಪ್ರದರ್ಶನದ ನಂತರ ನಡೆದ ಸಂವಾದದಲ್ಲಿ ಪಾಲ್ಗೊಂಡ ರಂಗಾಯಣದ ನಿರ್ದೇಶಕರಾದ ಶ್ರೀ ಅಡ್ಡಂಡ ಸಿ. ಕಾರ್ಯಪ್ಪರವರು ಸಂವಿಧಾನದ ಆಶಯವನ್ನು ಜನತೆಗೆ ತಲುಪಿಸಬೇಕಾಗಿದೆ. ಆ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಯೋಜನೆಗಳನ್ನು

ಹಮ್ಮಿಕೊಂಡಿವೆ. ಅಂತೆಯೇ ರಾಜ್ಯ ಸರ್ಕಾರದ ನಿರ್ದೇಶನದಂತೆ 'ಸೂತ್ರಧಾರ' ನಾಟಕವನ್ನು ರಂಗಾಯಣವು ಹಲವೆಡೆ ಪ್ರದರ್ಶಿಸುತ್ತಿದೆ. ಸಂವಿಧಾನದ ಆಶಯ ಮತ್ತು ಸಂವಿಧಾನದ ರಚನೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರರ ಕೊಡುಗೆಯನ್ನು ತಿಳಿಸುವುದು ಇದರ ಉದ್ದೇಶವಾಗಿದೆ ಎಂದು ಹೇಳಿದರು.

ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕ ರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಮಾತನಾಡಿ ಜನತೆಯನ್ನು ತಲುಪುವಲ್ಲಿ ಅತ್ಯಂತ ಪರಿಣಾಮಕಾರಿಯಾದ ಮಾಧ್ಯಮವಾಗಿರುವ ನಾಟಕ ಪ್ರಕಾರದಲ್ಲಿ ಸಂವಿಧಾನದ ಆಶಯಗಳನ್ನು ತಿಳಿಸುವ ಪ್ರಯತ್ನ ಶ್ಲಾಘನೀಯವಾದುದು. 'ಸೂತ್ರಧಾರ' ನಾಟಕ ಸಂವಿಧಾನದ ಆಶಯದ ಜೊತೆಗೆ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಭಾರತವನ್ನು ಚಿತ್ರಿಸುತ್ತದೆ. ಆ ಮೂಲಕ ನೋಡುಗರಲ್ಲಿ ದೇಶ ಮತ್ತು ಸಂವಿಧಾನದ ಬಗ್ಗೆ ಚಿಂತನಾತ್ಮವಾದ ಅರಿವು ಮೂಡಿಸುತ್ತದೆ. ಸರ್ವರೂ ಸಮಾನತೆಯಿಂದ ಬಾಳಬೇಕೆಂದು ಡಾ. ಅಂಬೇಡ್ಕರರ ಸಂವಿಧಾನದ ಆಶಯವಾಗಿದೆ. ನಾವುಗಳು ಆ ದಿಶೆಯಲ್ಲಿ ಸಮಾನತೆಯ ಸಮಾಜ ಕಟ್ಟಲು ಶ್ರಮಿಸಬೇಕು. ಆಗ ಮಾತ್ರ ಇಂತಹ ನಾಟಕಗಳ ಪ್ರದರ್ಶನ ಸಾರ್ಥಕವಾಗುತ್ತದೆ. ಸಂವಿಧಾನದ ಆಶಯವನ್ನು ಅಭಿನಯಿಸಿ ತೋರಿಸುವುದು ಸುಲಭದ ಕಾರ್ಯವಲ್ಲ. ರಂಗಾಯಣದ ಕಲಾವಿದರು ಹಲವು ರಂಗತಂತ್ರಗಳೊಂದಿಗೆ ಅತ್ಯಂತ ಯಶಸ್ವಿಯಾಗಿ ಅಭಿನಯಿಸಿದ್ದಾರೆ. ಈ ನಾಟಕ ಹೆಚ್ಚು ಪ್ರದರ್ಶನಗೊಳ್ಳಲಿ ಎಂದು ಆಶಿಸಿದರು.

ನಾಟಕದ ರಚನೆಕಾರರಾದ ಶ್ರೀ ಎಸ್. ರಾಮನಾಥ್‌ರವರು ಮಾತನಾಡಿ ಭಾರತ ಸಂವಿಧಾನದ ಶ್ರೇಷ್ಠತೆಯನ್ನು ಇಂದಿನ ತಲೆಮಾರಿನವರಿಗೆ ತಲುಪಿಸುವುದು ಬಹಳ ಮುಖ್ಯ ಕೆಲಸವಾಗಿದೆ. ಇಂದು ಹಲವೆಡೆ ವಾಕ್ ಸ್ವಾತಂತ್ರ್ಯದ ನೆಪದಲ್ಲಿ ಏನೇನೋ ಮಾತುಗಳನ್ನಾಡುತ್ತಿದ್ದಾರೆ. ಸಂವಿಧಾನದ ಆಶಯಗಳ ಗ್ರಹಿಕೆ ಸರಿಯಾಗಿ ಆಗುತ್ತಿಲ್ಲ. ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಹಿಂದಿನ ಉದ್ದೇಶವೇ ಅನೇಕರಿಗೆ ಗೊತ್ತಿಲ್ಲ. ಇವುಗಳನ್ನು ಸರಿಯಾಗಿ ಅರ್ಥಮಾಡಿಕೊಂಡಾಗ ಮಾತ್ರ ಪ್ರಜಾಪ್ರಭುತ್ವ ಗಟ್ಟಿಯಾಗಿ ನಿಲ್ಲಲು ಸಾಧ್ಯ. ಇವುಗಳ ಅವಶ್ಯಕತೆಯನ್ನು ಗಂಭೀರವಾಗಿ ಗ್ರಹಿಸಿ ಇವುಗಳಿಗೆ ಬಾಬಾಸಾಹೇಬರು ಸಂವಿಧಾನದಲ್ಲಿ ಪ್ರಧಾನ ಸ್ಥಾನ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಸೂತ್ರಧಾರ ನಾಟಕ ರಚಿಸಲಾಗಿದೆ ಎಂದರು.

ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹೆಚ್.ಸಿ. ಹೊನ್ನಪ್ಪರವರು ಸ್ವಾಗತಿಸಿದರು. ಕನ್ನಡ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಬಿ.ಎಸ್. ಸುದೀಪ್ ನಿರೂಪಿಸಿ, ವಂದಿಸಿದರು. ಸುಮಾರು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ನಾಟಕವನ್ನು ವೀಕ್ಷಿಸಿ, ಸಂವಾದದಲ್ಲಿ ಪಾಲ್ಗೊಂಡರು.

□

## ಭಿತ್ತಿಚಿತ್ರ ಮತ್ತು ಪ್ರಬಂಧ ಸ್ಪರ್ಧೆ

ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ ದಿನಾಂಕ 2.11.2021 ರಂದು ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ನೂತನ ಮತ್ತು ಭವಿಷ್ಯದ ಯುವ ಮತದಾರರಲ್ಲಿ ಚುನಾವಣೆ ಮತ್ತು ಮತದಾನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಜಾಗೃತಿ ಮೂಡಿಸುವ ಸಲುವಾಗಿ ಪ್ರತಿ ವರ್ಷದಂತೆ ಈ ವರ್ಷವೂ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಭಿತ್ತಿಚಿತ್ರ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಭಿತ್ತಿಚಿತ್ರ ಸ್ಪರ್ಧೆಯಲ್ಲಿ ಕು. ಕೆ.ಎಂ. ಅನನ್ಯ ಪ್ರಥಮ, ಕು. ಬಿ.ಬಿ. ಸುಮಯ ದ್ವಿತೀಯ, 'ಸದೃಢವಾದ ಪ್ರಜಾಪ್ರಭುತ್ವವನ್ನು ನಿರ್ಮಿಸಲು ಯುವ ಮತದಾರರಲ್ಲಿ ಮತದಾರರ ಶಿಕ್ಷಣ ಪಾತ್ರ' ವಿಷಯವಾಗಿ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಕು. ಬಿ.ಎಂ. ಸಹನ ಪ್ರಥಮ, ಕು. ಪುಣ್ಯಶ್ರೀ ದ್ವಿತೀಯ, ಕು. ಹೆಚ್.ಎಸ್. ಆಶಾ ತೃತೀಯ ಸ್ಥಾನ, ಇಂಗ್ಲಿಷ್ ಮಾಧ್ಯಮದಲ್ಲಿ ಕು. ತಾಂಜೀಯ ಪ್ರಥಮ, ಕು. ಬಿ. ಅರ್ಜುನ್ ದ್ವಿತೀಯ ಸ್ಥಾನ ಪಡೆದರು.

# ಜೆಎಸ್ಎಸ್ ಸಂಸ್ಥೆಗಳಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ

## ಭಾಷೆ ನಮ್ಮ ಬೆಳವಣಿಗೆಗೆ ಮೂಲ ಕಾರಣ



ಮೈಸೂರಿನ ಜೆಎಸ್ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಜೆಎಸ್ಎಸ್ ಕಾಲೇಜ್ ಆಫ್ ನರ್ಸಿಂಗ್, ಸ್ಕೂಲ್ಆಫ್ ನರ್ಸಿಂಗ್, ವಾಕ್ ಮತ್ತು ಶ್ರವಣ ಸಂಸ್ಥೆ ಹಾಗು ಕಾಲೇಜ್ ಆಫ್ ಫಿಸಿಯೋಥೆರಪಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವವನ್ನು ಶ್ರೀ ಬಿ.ಎಸ್. ಮಂಜುನಾಥಸ್ವಾಮಿ ಉದ್ಘಾಟಿಸಿದರು. ಡಾ. ಆರ್. ಸುಮ, ಶ್ರೀಮತಿ ಡಿ.ಎನ್. ರೇಣುಕಾದೇವಿ, ಕು. ಎಂ. ಅಮೂಲ್ಯ, ಶ್ರೀ ಆರ್. ಮಹೇಶ್, ಡಾ. ಕವಿತರಾಜರವರನ್ನು ಚಿತ್ರದಲ್ಲಿ ಕಾಣಬಹುದು

ಭಾಷೆಯನ್ನು ಪ್ರೀತಿಸಿದರೆ ಅದು ನಮ್ಮ ಬೆಳವಣಿಗೆಗೆ ಮೂಲ ಕಾರಣವಾಗುತ್ತದೆ ಎಂದು ಮೈಸೂರು ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಬಿ.ಎಸ್. ಮಂಜುನಾಥಸ್ವಾಮಿ ಹೇಳಿದರು.

ಮೈಸೂರಿನ ಜೆಎಸ್ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ದಿನಾಂಕ 9.11.2021ರಂದು ಜೆಎಸ್ಎಸ್ ಕಾಲೇಜ್ ಆಫ್ ನರ್ಸಿಂಗ್, ಸ್ಕೂಲ್ ಆಫ್ ನರ್ಸಿಂಗ್, ವಾಕ್ ಮತ್ತು ಶ್ರವಣ ಸಂಸ್ಥೆ ಹಾಗು ಕಾಲೇಜ್ ಆಫ್ ಫಿಸಿಯೋಥೆರಪಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡುತ್ತಾ ಕರ್ನಾಟಕದ ಏಕೀಕರಣ, ಆರೋಗ್ಯ ವಿಜ್ಞಾನದಲ್ಲಿ ಕನ್ನಡದ ಮಹತ್ವ, ಬೆಳವಣಿಗೆಯ ಹಾದಿಯಲ್ಲಿ ಭಾಷೆಯ ಪ್ರಾಮುಖ್ಯತೆ ಹಾಗು ಅವಶ್ಯಕತೆಯ ಬಗ್ಗೆ ತಿಳಿಸಿದರು. ಪ್ರಾದೇಶಿಕ ಭಾಷೆಯ ವಿಶೇಷತೆಯನ್ನು ವಿವರಿಸುತ್ತಾ ಅನ್ಯ ಭಾಷೆಗಳ ಮೇಲೆ ಗೌರವವಿರಬೇಕು ಮತ್ತು ಕನ್ನಡದ ಮೇಲೆ ಅಪಾರ ಪ್ರೀತಿ ಹೊಂದಿರಬೇಕು. ಭಾಷೆಯ ಬಗ್ಗೆ ಅಭಿಮಾನ ಪಡಬೇಕು, ದುರಭಿಮಾನಪಡಬಾರದು. ನಾವು ನವೆಂಬರ್ ಕನ್ನಡಿಗರಾಗದೆ ನಿರಂತರ ಕನ್ನಡಿಗರಾಗಿರಬೇಕು ಎಂದು ತಿಳಿಸಿದರು.

ಎದೆತುಂಬಿ ಹಾಡುವೆನು ಸೀಸನ್ 12ರ ವಿಜೇತರಾದ ಕು. ಎಂ. ಅಮೂಲ್ಯ ಕನ್ನಡದ ಪ್ರಾಚೀನತೆ, ಲಿಪಿ, ಸಂಸ್ಕೃತಿ, ವೈವಿಧ್ಯತೆ, ಪರಂಪರೆಯನ್ನು ಸ್ಮರಿಸಿದರು. ಕವಿರಾಜಮಾರ್ಗದಲ್ಲಿ ನೃಪತುಂಗ ಕನ್ನಡಿಗರ ವಿವರಣೆಯನ್ನು ನೀಡಿದ ಬಗ್ಗೆ ಸಂಕ್ಷಿಪ್ತವಾಗಿ ನುಡಿದರು. ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಕವಿಗಳ, ರಾಜರ ಹಾಗು ಹೋರಾಟಗಾರರ ಕೊಡುಗೆ ಅಪಾರವಾದುದು. ಕನ್ನಡ ಒಂದು ಭಾಷೆಯಲ್ಲ, ಅದು ಒಂದು ಭಾವನೆ. ಈ ಭಾಷೆಯ ಮೇಲೆ ಅಪಾರವಾದ ಅಭಿಮಾನ ಹೊಂದಿರಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜೆಎಸ್ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು ಕನ್ನಡ ಬರೀ ಭಾಷೆಯಲ್ಲ, ನೆಲವಲ್ಲ, ಅದರೊಂದಿಗೆ ನಾವು ಭಾವನಾತ್ಮಕ ಸಂಬಂಧವನ್ನು

ಹೊಂದಿದ್ದೇವೆ. ಕನ್ನಡ ಭಾಷೆಯು ಇತರೆ ಭಾಷೆಗಳಿಗಿಂತ ಪುರಾತನ ಇತಿಹಾಸವನ್ನು ಹೊಂದಿದೆ. ಕನ್ನಡ ನಾಡು ಜಗತ್ತಿನ ಪ್ರಜಾತಂತ್ರ ವ್ಯವಸ್ಥೆಗೆ ಬಹುದೊಡ್ಡ ಕೊಡುಗೆ ನೀಡಿದೆ. ಮನದೊಳಗು ಕನ್ನಡ, ಮನಸೊಳಗು ಕನ್ನಡ, ಕನ್ನಡವೇ ಎಲ್ಲಾ, ಕನ್ನಡವಿಲ್ಲದೆ ಬೇರೇನೂ ಇಲ್ಲ. ಇಂದು ಭಾಷೆಯ ಬೆಳವಣಿಗೆಗೆ ನಮ್ಮ ಅಭಿಮಾನದ ಕೊರತೆಯೇ ಕಾರಣ. ಲಿಪಿಗಳ ರಾಣಿ ಕನ್ನಡ. ಈ ನಾಡು ನಮ್ಮದು, ಈ ಭಾಷೆ ನಮ್ಮದು ಎಂಬ ಕಹಳೆಯನ್ನು ಮೊಳಗಿಸಿ ಇದನ್ನು ಬಾನೆತ್ತರಕ್ಕೆ ಕೊಂಡೊಯ್ಯುವ ಅವಶ್ಯಕತೆಯಿದೆ. ಕನ್ನಡ ಕಾಮಧೇನು, ಕರ್ನಾಟಕ ಕಲ್ಪವೃಕ್ಷ, ಇಂತಹ ನೆಲದಲ್ಲಿ ವಾಸಿಸುವ ನಾವೆಲ್ಲರೂ ಪುಣ್ಯವಂತರು. ಕನ್ನಡ ಭಾಷೆಯನ್ನು ಬಳಸಿ ಬೆಳಸಿ ಉಳಿಸುವ ಬಗ್ಗೆ ಎಲ್ಲರೂ ಯೋಚಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರಾದ ಡಾ. ಎನ್.ಪಿ. ನಟರಾಜ್‌ರವರು, ಪ್ರಾಂಶುಪಾಲರಾದ ಡಾ. ಆರ್. ಸುಮ, ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಕವಿತರಾಜ, ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಶ್ರೀಮತಿ ಎಂ.ಕೆ. ಅಶ್ವತಿದೇವಿ, ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಶ್ರೀಮತಿ ಡಿ. ಎನ್. ರೇಣುಕಾದೇವಿ ಹಾಗು ಎಲ್ಲಾ ಅಂಗ ಸಂಸ್ಥೆಯ ಬೋಧಕ ಬೋಧಕೇತರ ವರ್ಗದವರು ಹಾಗು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ವಿದ್ಯಾರ್ಥಿಗಳು ಪ್ರಾರ್ಥನಾ ಗೀತೆಯನ್ನು ಹಾಡಿದರು. ಜೆಎಸ್‌ಎಸ್ ನರ್ಸಿಂಗ್ ಶಾಲೆಯ ಬೋಧಕರಾದ ಶ್ರೀಮತಿ ಎಸ್. ನೀತಾಡಲ್ವಿ ಸ್ವಾಗತಿಸಿದರು. ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಸರಸ್ವತಿ ಪುರೋಹಿತ್‌ರವರು ವಂದಿಸಿದರು. ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ ಬೋಧಕರಾದ ಶ್ರೀ ಸುನೀಲ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು



ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳಲ್ಲಿ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು. ಚಿತ್ರದಲ್ಲಿ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ. ಸಿ.ಜಿ. ಉಷಾದೇವಿ ಹಾಗೂ ವೆರಿಸ್ಕ್ ಫೈನಾನ್ಸಿಯಲ್ ಫಿಂಟೆಕ್ಸ್‌ನ ಅಧ್ಯಕ್ಷರಾದ ಶ್ರೀ ಶೈಲೇಂದ್ರ ಮೃತ್ಯುಂಜಯಪ್ಪನವರು ಹಾಗೂ ಸುತ್ತೂರು ಸಂಸ್ಥೆಗಳ ಮುಖ್ಯಸ್ಥರುಗಳಿದ್ದಾರೆ

ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆಶ್ರಯದಲ್ಲಿ ಮಕ್ಕಳ ದಿನಾಚರಣೆ ಮತ್ತು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ. ಸಿ.ಜಿ. ಉಷಾದೇವಿಯವರು ಮಾತನಾಡಿ ಕುವೆಂಪುರವರು 'ಕನ್ನಡಕ್ಕಾಗಿ ಕೈ ಎತ್ತು ಅದು ಕಲ್ಪವೃಕ್ಷವಾಗುವುದು' ಎಂದು ಹೇಳಿದ್ದಾರೆ. ಕನ್ನಡ ನಾಡು ನುಡಿಗಾಗಿ ಸೇವೆ ಮಾಡಿ. ಇಂದಿನ ವಿದ್ಯಾರ್ಥಿಗಳೆ ಮುಂದಿನ ಭವಿಷ್ಯದ ಪ್ರಜೆಗಳಾಗಿದ್ದು ಈ ನಾಡು, ನುಡಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಂತಹ ವ್ಯಕ್ತಿಗಳಾಗಿ,

ಸಮಾಜಕ್ಕಾಗಿ ತಮ್ಮದೇ ಕೊಡುಗೆಗಳನ್ನು ಕೊಡುವಂತವರಾಗ ಬೇಕು. ಕನ್ನಡಕ್ಕಾಗಿ ನನ್ನಂತವರು ಹಲವರಿದ್ದಾರೆ, ಆದರೆ ನನಗಿರುವುದು ಒಂದೇ ಕನ್ನಡ. ನಮ್ಮ ಬದುಕಿನಲ್ಲಿ ಕನ್ನಡವನ್ನು ಹಾಸುಹೊಕ್ಕಾಗಿ ಬಳಸಿಕೊಳ್ಳಬೇಕು. ಜೀವನಕ್ಕಾಗಿ ಯಾವುದೇ ಭಾಷೆಯನ್ನಾದರೂ ಆಯ್ಕೆ ಮಾಡಿಕೊಳ್ಳಿ, ಆದರೆ ಹೃದಯ ಭಾಷೆಯನ್ನಾಗಿ ಕನ್ನಡವನ್ನು ಬಳಸಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ವೆರಿಸ್ಕ್ ಫೈನಾನ್ಸಿಯಲ್ ಫಿಂಟ್ಲಿಕ್ಸ್‌ನ ಅಧ್ಯಕ್ಷರಾದ ಶ್ರೀ ಶೈಲೇಂದ್ರ ಮೃತ್ಯುಂಜಯಪ್ಪನವರು ಮಾತನಾಡಿ, ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ಹೊಂದಿರಬೇಕು. ಪರಿಣತಿ, ಅನುಭವದ ಜೊತೆಗೆ ಒಳ್ಳೆಯ ಮನೋಭಾವನೆ ಇರಬೇಕು. ಸಿಕ್ಕ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು, ಜಯದೊಂದಿಗೆ ಕೀರ್ತಿಯನ್ನು ಸಂಪಾದಿಸಬೇಕು. ಯಾವಾಗಲೂ ಏಕೆ? ಹೇಗೆ? ಎಂಬ ಪ್ರಶ್ನೆಯನ್ನು ಕೇಳುವಂತಹ ಕುತೂಹಲಕಾರಿಗಳಾಗಿರಬೇಕು ಎಂದು ತಿಳಿಸಿದರು.

ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಸಂಯೋಜನಾಧಿಕಾರಿ ಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕರವರು ದಿನಾಚರಣೆಗಳು ಕೇವಲ ಸಾಂಕೇತಿಕವಾಗಿ ಆಚರಣೆಯಾಗಬಾರದು, ನಿತ್ಯವೂ ಆಚರಣೆಯಾಗಬೇಕು. ಕನ್ನಡ ರಾಜ್ಯೋತ್ಸವ ಎಂದರೆ ಭಾಷೆಗೆ ಸೀಮಿತಗೊಳಿಸದೆ, ಸಂಸ್ಕೃತಿಯನ್ನು ಬಿಂಬಿಸುವಂತಹ ನಾಡಿನಲ್ಲಿರುವ ಸ್ಮಾರಕಗಳು, ಗುಡಿ, ಗೋಪುರ, ನದಿ ಮತ್ತು ನಾಡು ನುಡಿಗಳನ್ನು ಗೌರವಿಸಬೇಕು ಎಂದು ನುಡಿದರು.

ಇದೇ ಸಂದರ್ಭದಲ್ಲಿ 2020–21ನೇ ಸಾಲಿನಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ವಿವಿಧ ದತ್ತಿ ವತಿಯಿಂದ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ಹಾಗೂ ಶ್ರೀ ಶೈಲೇಂದ್ರ ಮೃತ್ಯುಂಜಯಪ್ಪ ಹಾಗೂ ಅವರ ಕುಟುಂಬವರ್ಗದವರು ಬಡವಿದ್ಯಾರ್ಥಿಗಳಿಗೆ ಬ್ಯಾಗ್ ಮತ್ತು ನೋಟ್ ಪುಸ್ತಕಗಳನ್ನು ವಿತರಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥರುಗಳಾದ ಶ್ರೀ ಸಂಪತ್ತು, ಶ್ರೀ ವೀರಭದ್ರಯ್ಯ, ಡಾ. ಎಂ.ಸಿ. ನಟರಾಜು, ಶ್ರೀ ಜಿ. ಶಿವಮಲ್ಲು. ಶ್ರೀಮತಿ ಸಿ.ಪಿ. ನಿರ್ಮಲ, ಶ್ರೀ ಜಿ.ಎಂ. ಷಡಕ್ಷರಿ, ಶ್ರೀಮತಿ ಪಿ. ಸುಶೀಲ ಹಾಗೂ ಶ್ರೀ ಮಹದೇವಪ್ರಸಾದ್ ಉಪಸ್ಥಿತರಿದ್ದರು.

ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಬಿ.ಆರ್. ಪಂಚಾಕ್ಷರಿ ಸ್ವಾಗತಿಸಿದರು. ಶ್ರೀ ಎನ್.ಪಿ. ಪರಶಿವಮೂರ್ತಿ ವಂದಿಸಿದರು. ಶ್ರೀ ಡಿ.ಎಸ್. ವೀರಭದ್ರಪ್ಪ ಕಾರ್ಯಕ್ರಮವನ್ನು ನಿರೂಪಿಸಿದರು. □

## ಜೆಎಸ್‌ಎಸ್ ಮಹಿಳಾ ಡಿ.ಇಎಲ್.ಇಡಿ. ಕಾಲೇಜು

ಜೆಎಸ್‌ಎಸ್ ಮಹಿಳಾ ಡಿ.ಇಎಲ್.ಇಡಿ. ಕಾಲೇಜಿನ ಸಮುಚ್ಚಯದಲ್ಲಿ ದಿನಾಂಕ 1.11.2021ರಂದು 66ನೇ ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು. ಸರಸ್ವತಿಪುರಂ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರಾದ ಶ್ರೀ ಹೆಚ್.ಬಿ. ಶ್ರೀಧರ ಕನ್ನಡ ನಾಡಿನ ಏಕೀಕರಣದ ಬಗ್ಗೆ ವಿವರಿಸಿ; ಕನ್ನಡ ನಾಡು–ನುಡಿಗೆ ಹೋರಾಡಿ ಹೆಸರು ತಂದ ಕವಿವರ್ಯರನ್ನು ಸ್ಮರಿಸಿದರು.

ಪ್ರಾಂಶುಪಾಲರಾದ ಶ್ರೀಯುತ ವೈ.ಎನ್. ಬಸವರಾಜು ಪ್ರತಿಯೊಬ್ಬ ಕನ್ನಡಿಗರೂ ನಾಡಿನ ಭಾಷೆ, ನೆಲ, ಜಲದ ಬಗ್ಗೆ ಅಭಿಮಾನ ಹೊಂದಿರಬೇಕು ಹಾಗೂ ಕನ್ನಡ ಭಾಷಾಭಿಮಾವನ್ನು ಮೆರೆಯುವುದರ ಜತೆಗೆ ಕನ್ನಡ ಭಾಷಾ ಬೆಳವಣಿಗೆಗೆ ಕಿಂಚಿತ್ತಾದರೂ ಶ್ರಮಿಸಬೇಕೆಂದು ತಿಳಿಸಿದರು.

ಸಮುಚ್ಚಯದ ವಿದ್ಯಾರ್ಥಿನಿಲಯದ ಮುಖ್ಯ ನಿಲಯಪಾಲಕರಾದ ಶ್ರೀಮತಿ ಮಮತ ಸುರೇಶ್, ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಮತಿ ಡಿ.ಆರ್. ಮಂಜುಳ, ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ರಾದ ಶ್ರೀಮತಿ ಕೆ.ಎಸ್. ಪ್ರೇಮಲತ, ಸಹನಾ ಶಾಲೆಯ ಮುಖ್ಯಸ್ಥರಾದ ಶ್ರೀ ಎಂ.ಡಿ. ಶಿವಬಸಪ್ಪ, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. □

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಚಾಮರಾಜನಗರ



ಚಾಮರಾಜನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ 66 ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕನ್ನಡ ಶಿಕ್ಷಕರಾದ ಶ್ರೀಮತಿ ಎಲ್.ಎಂ. ಆಶಾರಾಣಿ ಕನ್ನಡದ ಏಕೀಕರಣವನ್ನು ಕುರಿತು ಮಾತನಾಡಿದರು. ಶ್ರೀ ಹೆಚ್.ಬಿ. ಕುಮಾರಸ್ವಾಮಿ ಹಾಗೂ ಶ್ರೀ ಎಲ್. ಪ್ರಸನ್ನಕುಮಾರ್ ಚಲನಚಿತ್ರಗೀತೆಯನ್ನು ಹಾಡಿದರು. ಶ್ರೀ ಚೇತನ್ ಕುಮಾರ್ ಕನ್ನಡದ ನಾಡು ನುಡಿ ಮತ್ತು ಮಾತೃಭಾಷೆಯ ಶಿಕ್ಷಣದ ಮಹತ್ವವನ್ನು ಕುರಿತು ಮಾತನಾಡಿದರು. ಪ್ರಾಂಶುಪಾಲರಾದ ಹೆಚ್.ಎಂ. ಉಮೇಶ್‌ವರು ಮಾತನಾಡಿ ಪ್ರಸ್ತುತ ಸನ್ನಿವೇಶದಲ್ಲಿ ಸಮರ್ಪಕವಾಗಿ ಕನ್ನಡ ಭಾಷೆಯನ್ನು ಕಲಿಯುವುದರ ಜೊತೆಗೆ ಬಹುಭಾಷೆಗಳ ಜ್ಞಾನದ ಅವಶ್ಯಕತೆ ಕುರಿತು ತಿಳಿಸಿಕೊಟ್ಟರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರು ಭಾಗವಹಿಸಿದ್ದರು. ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಕು. ಎನ್. ಹರ್ಷಿತಾ ಪ್ರಾರ್ಥಿಸಿದರು. ಕು. ಆರ್. ಉತ್ಸವ್ ಸ್ವಾಗತಿಸಿದರು. ಕು. ಎಂ ಅನರ್ಘ್ಯ ವಂದಿಸಿದರು. ಕು. ಹೆಚ್.ಯು. ಶ್ರೇಯಾ ನಿರೂಪಿಸಿದರು.

□

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಡಾ. ರಾಧಾಕೃಷ್ಣನ್ ನಗರ

ಮೈಸೂರು ಡಾ. ರಾಧಾಕೃಷ್ಣನ್ ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ದಿನಾಂಕ 16.11.2021ರಂದು 66ನೇ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು.

ಪ್ರಾಂಶುಪಾಲರಾದ ಶ್ರೀಮತಿ ಆಶಾರವರು ಕನ್ನಡ ರಾಜ್ಯೋತ್ಸವದ ಬಗ್ಗೆ ಮಾತನಾಡುತ್ತಾ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸೋಣ, ಇತರ ಭಾಷೆಗಳನ್ನು ಕಲಿಯೋಣ, ಗೌರವಿಸೋಣ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು, ಮಕ್ಕಳ ಸರ್ವತೋಮುಖ ಅಭಿವೃದ್ಧಿಯಿಂದ ಮಾತ್ರ ಉತ್ತಮ ನಾಗರಿಕರನ್ನು ರೂಪಿಸಲು ಸಾಧ್ಯ ಎಂದು ಹೇಳಿದರು. 7ನೇ ತರಗತಿಯ ವಿದ್ಯಾರ್ಥಿ ಮನೀಶ್ ಕನ್ನಡ ನಾಡು ನುಡಿಯ ಬಗ್ಗೆ, 9ನೇ ತರಗತಿಯ ವಿದ್ಯಾರ್ಥಿ ಕು. ಗಾನವಿ ಆನಂದ್ ಮಕ್ಕಳ ದಿನಾಚರಣೆಯ ಬಗ್ಗೆ ಭಾಷಣ ಮಾಡಿದಳು.

ಶಿಕ್ಷಕರು ಪ್ರಾರ್ಥಿಸಿದರು. 7ನೇ ತರಗತಿಯ ವಿದ್ಯಾರ್ಥಿನಿಯರು ಸಮೂಹ ಗಾಯನವನ್ನು ಮಾಡಿದರು. ಶ್ರೀಮತಿ ಸಿಲಿಯಾ ಅತ್ತರ್ ವಂದಿಸಿದರು. ಶ್ರೀ ರಮೇಶ್‌ರವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

□

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯ, ಮೈಸೂರು



ಮೈಸೂರು ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ದಿನಾಂಕ 19.11.2021ರಂದು 66ನೇ ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು.

ಸಮಾಜ ವಿಜ್ಞಾನ ಶಿಕ್ಷಕರಾದ ಶ್ರೀಮತಿ ಶೈಲಜರವರು ನಾಡಿಗೆ ನೆಹರೂರವರ ಕೊಡುಗೆ ಹಾಗೂ ನೆಹರೂರವರ ಜನ್ಮದಿನವನ್ನು ಮಕ್ಕಳ ದಿನಾಚರಣೆಯಾಗಿ ಆಚರಿಸುವುದರ ಹಿನ್ನಲೆಯ ಬಗ್ಗೆ ತಿಳಿಸಿದರು. ಕನ್ನಡ ಶಿಕ್ಷಕರಾದ ಶ್ರೀಮತಿ ಶೋಭಾರವರು ಕನ್ನಡನಾಡಿನ ಇತಿಹಾಸ ಪರಂಪರೆ, ಹಿರಿಮೆ ಗರಿಮೆಯ ಬಗ್ಗೆ ತಿಳಿಸಿದರು.

ಪ್ರಾಂಶುಪಾಲರಾದ ಶ್ರೀ ಗುರುಪ್ರಸಾದ್‌ರವರು ಪ್ರಸ್ತುತ ಸಂದರ್ಭದಲ್ಲಿ ಕನ್ನಡದ ಅಳಿವು ಉಳಿವಿನ ಬಗ್ಗೆ ತಿಳಿಸಿದರು. 10ನೇ ತರಗತಿ ವಿದ್ಯಾರ್ಥಿಗಳಾದ ನಿಹಾರಿಕ ಮತ್ತು ಧ್ವನಿಕ ಕಾರ್ಯಕ್ರಮ ನಿರೂಪಿಸಿದರು. ಸಾತ್ವಿಕ್ ಸ್ವಾಗತಿಸಿದರು. ಆಕಾಶ್ ವಂದಿಸಿದರು. 9ನೇ ತರಗತಿಯ ಮಕ್ಕಳು ಪ್ರಾರ್ಥಿಸಿದರು. 6ನೇ ತರಗತಿಯ ಮಕ್ಕಳು ಕನ್ನಡದ ಗೀತೆಗಳಿಗೆ ನರ್ತಿಸಿದರು. ಬೋಧಕ ವೃಂದದವರು ಉಪಸ್ಥಿತರಿದ್ದರು.

□

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಎಚ್‌ಎಸ್‌ಆರ್ ಬಡಾವಣೆ, ಬೆಂಗಳೂರು



66ನೇ ಕನ್ನಡ ರಾಜ್ಯೋತ್ಸವ ಮತ್ತು ಮಕ್ಕಳ ದಿನಾಚರಣೆಯನ್ನು ದಿನಾಂಕ 15.11.2021ರಂದು ಬೆಂಗಳೂರಿನ ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಆಚರಿಸಲಾಯಿತು. ಪ್ರಾಂಶುಪಾಲರು ಮತ್ತು ಶಿಕ್ಷಕರು ತಾಯಿ ಭುವನೇಶ್ವರಿ ದೇವಿ ಮತ್ತು ಜವಾಹರಲಾಲ್ ನೆಹರು ಅವರ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿದರು. 9ನೆಯ ತರಗತಿಯ ವಿದ್ಯಾರ್ಥಿನಿಯರು ನೃತ್ಯ ಪ್ರದರ್ಶಿಸಿದರು. ಶ್ರೀಮತಿ ಹೇಮಾವತಿ ಪ್ರಾರ್ಥಿಸಿದರು. ☐




ಬೆಂಗಳೂರಿನ ಎಚ್‌ಎಸ್‌ಆರ್ ಬಡಾವಣೆಯಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಎನ್‌ಸಿಸಿ ತಂಡವು ದಿನಾಂಕ 28.11.2021 ರಂದು ರಾಮೋಹಳ್ಳಿಯಲ್ಲಿರುವ ಜೆಎಸ್‌ಎಸ್ ಆಶ್ರಮ ಮತ್ತು ದೊಡ್ಡ ಆಲದ ಮರದ ಕಡೆ ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಶಾಲೆಯ ದೈಹಿಕ ಶಿಕ್ಷಕರಾದ ಶ್ರೀ ಅಶೋಕ್‌ರವರ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯಿತು




ವಾಣಿಜ್ಯೋದ್ಯಮಿಗಳಾದ ಶ್ರೀಮತಿ ವಿದ್ಯಾ ರಾಮಮೂರ್ತಿರವರು ಹಾಬಿಸ್ ಆ್ಯಸ್ ಬ್ಯುಸಿನೆಸ್ ಕೆರಿಯರ್ ಎಂಬ ವಿಷಯದ ಬಗ್ಗೆ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದರು. ಜೀವನದಲ್ಲಿ ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ವಿದ್ಯಾರ್ಥಿಗಳು, ತಮ್ಮ ಓದಿನ ಜೊತೆ, ಪ್ರತಿ ದಿನ ಅರ್ಧ ಗಂಟೆ ಹವ್ಯಾಸಗಳಿಗೆ ಮೀಸಲಿಡಬೇಕು. ಹವ್ಯಾಸಗಳು ನಮ್ಮ ಜೀವನದ ಪಥವನ್ನೇ ಬದಲಾಯಿಸುತ್ತವೆ. ಎಲ್ಲಾ ತಂದೆ-ತಾಯಿಯರು ತಮ್ಮ ಮಕ್ಕಳಿಗೆ ಯಾವ ವಿಷಯದಲ್ಲಿ ಆಸಕ್ತಿ ಇರುತ್ತದೋ ಆ ವಿಷಯದಲ್ಲಿ ಹೆಚ್ಚು ತರಬೇತಿ ಕೊಡಬೇಕು. ನಾವು ಸದಾ ಕ್ರಿಯಾಶೀಲರಾಗಬೇಕು. ಭಗವಂತ ನಮ್ಮನ್ನು ಒಂದು ಉದ್ದೇಶ ಈಡೇರಿಸುವುದಕ್ಕೆ ಸೃಷ್ಟಿಸಿದ್ದಾನೆ. ನಾವು ಸಮಾಜದಿಂದ ಏನಾದರೂ ತೆಗೆದುಕೊಂಡರೆ ನಾವೂ ಸಮಾಜಕ್ಕೆ ಏನಾದರೂ ಕೊಡಬೇಕು. ನಾವು ಜೀವನದಲ್ಲಿ ಅವಕಾಶಕ್ಕಾಗಿ ಕಾಯಬಾರದು; ಅದರ ಬದಲು ಅವಕಾಶವೇ ನಮ್ಮನ್ನು ಕಾಯಬೇಕು ಎಂಬಂತೆ ಬೆಳೆಯಬೇಕು ಎಂದು ತಿಳಿಸಿದರು.

## ವಿದ್ಯಾರ್ಥಿ ಜೀವನದಲ್ಲಿ ಏಕಾಗ್ರತೆ ಬಹಳ ಮುಖ್ಯ

ವಿದ್ಯಾರ್ಥಿ ಜೀವನದಲ್ಲಿ ಏಕಾಗ್ರತೆ ಬಹಳ ಮುಖ್ಯ ಎಂದು ಚಾಮರಾಜನಗರದ ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಎಸ್. ಕಾತ್ಯಾಯಿನಿ ದೇವಿಯವರು ತಿಳಿಸಿದರು.

ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಇಂಡಕ್ಷನ್ ಸಮಿತಿ ಮತ್ತು ಸಾಂಸ್ಕೃತಿಕ ವೇದಿಕೆ ಸಮಿತಿಯ ವತಿಯಿಂದ ದಿನಾಂಕ 19.11.2021ರಂದು ಆಯೋಜಿಸಿದ್ದ ಎಳೆವರಿಗೆ ಬಳೆವರ ಸ್ವಾಗತ ಕಾರ್ಯಕ್ರಮವನ್ನು ಉದ್ಘಾಟಿಸಿ ಗುರು ಮುಖೇನ ಕಲಿಕೆಯಾಗಬೇಕು. ವಿದ್ಯಾರ್ಥಿ ಜೀವನದಲ್ಲಿ ಏಕಾಗ್ರತೆ, ವಿನಯಶೀಲತೆ, ಶಿಸ್ತು, ಆರೋಗ್ಯ ಆತ್ಮವಿಶ್ವಾಸ ಬಹಳ ಮುಖ್ಯ ಎಂದು ಹೇಳಿದರು.

ಹರದನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳಾದ ಡಾ ಚಂದ್ರಕಲಾ ಹಣಗಿ ಮಾತನಾಡುತ್ತಾ ಸಾಂಪ್ರದಾಯಿಕ ಶಿಕ್ಷಣದ ಜೊತೆಗೆ ಮೌಲ್ಯ, ಕೌಶಲ್ಯಗಳನ್ನು ನಾವು ಬೆಳೆಸಿಕೊಳ್ಳಬೇಕು. ಹೆತ್ತವರ ಕನಸುಗಳು ನಾವಾಗಬೇಕು. ಶ್ರಮದ ಜೊತೆಗೆ ಶ್ರದ್ಧೆ, ಬದುಕಿನಲ್ಲಿ ಸ್ಪಷ್ಟತೆ ಇರಬೇಕು. ಮಾನಸಿಕ ಸಧೃಡತೆ ಇರಬೇಕು. ಸ್ಪರ್ಧಾತ್ಮಕ ಪರೀಕ್ಷೆಗೆ ವಿದ್ಯಾರ್ಥಿನಿಯರು ತೆರೆದುಕೊಳ್ಳಬೇಕು ಎಂದು ಹೇಳಿದರು.

ಪ್ರಾಂಶುಪಾಲರಾದ ಶ್ರೀ ಕೆ.ಎಸ್. ಮರಿಸ್ವಾಮಿಯವರು ಸಂಕುಚಿತ ಭಾವನೆ ತೊಡೆದುಹಾಕಿ ಎಲ್ಲಾ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಬೇಕು. ವಿಷಯಗಳು ಯಾವುದೇ ಇರಲಿ ಕಷ್ಟಪಟ್ಟು ಓದದೆ ಇಷ್ಟಪಟ್ಟು ಓದಿ. ಅದರ ಫಲ ಸಿಗುತ್ತದೆ. ಮುಂದೆ ಗುರಿ ಇರಲಿ ಹಿಂದೆ ಗುರು ಇರುತ್ತಾರೆ. ತಂದೆ ತಾಯಿಯರ ಭರವಸೆಯನ್ನು ಹುಸಿಗೊಳಿಸಬೇಡಿ ಎಂದು ತಿಳಿಸಿದರು.

ಆಗ್ರಾದಲ್ಲಿ ನಡೆದ ಅಂತರ ರಾಜ್ಯ ಮಟ್ಟದ ಕಬಡ್ಡಿ ಮತ್ತು ಅಥ್ಲೆಟಿಕ್ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿನಿಯರಿಗೆ ಪ್ರಶಸ್ತಿ ಪತ್ರ ಮತ್ತು ಪದಕಗಳನ್ನು ನೀಡಲಾಯಿತು.

ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರು ಮತ್ತು ಇಂಡಕ್ಷನ್ ಸಮಿತಿಯ ಸಂಚಾಲಕರಾದ ಶ್ರೀ ಸಿದ್ಧರಾಜುರವರು ಕಾರ್ಯಕ್ರಮದ ರೂಪುರೇಷೆಗಳು, ಹೊಸ ಶಿಕ್ಷಣ ನೀತಿಯ ನಿಯಮಗಳು ಹಾಗೂ ನಮ್ಮ ಸಂಸ್ಕೃತಿಯ ಮೌಲ್ಯಗಳನ್ನು ರೂಢಿಸಿಕೊಳ್ಳುವುದರ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸ್ನಾತಕೋತ್ತರ ವಿಭಾಗದ ಸಂಯೋಜಕರಾದ ಶ್ರೀಮತಿ ಬಿಂದುಶ್ರೀ ಪ್ರಾರ್ಥಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ಉಮೇಶ್ ಸ್ವಾಗತಿಸಿದರು. ಸಂಸ್ಕೃತ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಂ.ಬಿ. ಸರ್ವಮಂಗಳ ವಂದಿಸಿದರು. ಶ್ರೀಮತಿ ಎಸ್. ಅಂಬಿಕಾದೇವಿ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಕನಕದಾಸ ಜಯಂತಿ

### ಜೆಎಸ್‌ಎಸ್ ಪ್ರೌಢಶಾಲೆ, ಲಕ್ಷ್ಮೀಪುರಂ, ಮೈಸೂರು

ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಕನಕದಾಸರು ಒಬ್ಬರು ಎಂದು ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯ ಸಹಶಿಕ್ಷಕರಾದ ಶ್ರೀ ಎಸ್. ಮಹೇಶ್‌ರವರು ಹೇಳಿದರು.

ದಿನಾಂಕ 22.11.2021 ರಂದು ನಡೆದ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಭಕ್ತಿ, ಕವಿತ್ವ ಮತ್ತು ಸಂಗೀತದಲ್ಲಿಯ ಸಾಧನೆಗೆ ಜಾತಿ ಎಂದೂ ತೊಡಕಾಗುವುದಿಲ್ಲ ಎನ್ನುವುದಕ್ಕೆ ಕನಕದಾಸರ ಜೀವನ ಒಂದು ಜ್ವಲಂತ ಉದಾಹರಣೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯರಾದ ಶ್ರೀ ಎಂ.ಸಿ. ದೇವರಾಜು ರವರು ಕನಕದಾಸರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ವಿವರಿಸಿದರು.

ಶ್ರೀ ನಾಗರಾಜು ಪ್ರಾರ್ಥಿಸಿದರು. ಶ್ರೀ ಹೆಚ್.ಬಿ. ಮಂಜುನಾಥ್ ಸ್ವಾಗತಿಸಿದರು. ಶ್ರೀ ಪ್ರಕಾಶ್ ವಂದಿಸಿದರು. ಶ್ರೀ ಕೆ.ಎಂ. ಬಸವಣ್ಣನವರು ಕಾರ್ಯಕ್ರಮ ನಿರೂಪಿಸಿದರು.

☐

## ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ



ಕೊಳ್ಳೇಗಾಲ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕನಕದಾಸ ಜಯಂತಿಯನ್ನು ಆಚರಿಸಲಾಯಿತು. ಶ್ರೀಮತಿ ವಾಣಿ, ಶ್ರೀಮತಿ ಭ್ರಮರಾಂಬ, ಪ್ರಾಚಾರ್ಯರಾದ ಪ್ರೊ. ಉಮೇಶ, ಶ್ರೀಮತಿ ಪುಟ್ಟಮ್ಮ ಹಾಗು ಶ್ರೀ ಬಸವದತ್ತ ಮಹದೇವಪ್ರಸಾದ್‌ರವನ್ನು ಕಾಣಬಹುದು

ಯಾವುದೇ ಒಂದು ಜಾತಿ, ಧರ್ಮ, ಪ್ರದೇಶ, ಭಾಷೆಯಿಂದ ದೂರ ಉಳಿದ, ಎಲ್ಲರಲ್ಲೂ ಭಕ್ತಿಯನ್ನು ಸಾರಿದ, ಭಗವಾನ್ ಹರಿಭಕ್ತಿಯನ್ನು ಕನ್ನಡದಲ್ಲಿ ಸುಲಭವಾಗಿ ಬೋಧಿಸಿದ ಕನಕದಾಸರು ದಾಸ ಶ್ರೇಷ್ಠರಲ್ಲಿ ಒಬ್ಬರು ಎಂದು ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ವಾಣಿ ಹೇಳಿದರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 23.11.2021ರಂದು ಸಾಂಸ್ಕೃತಿಕ ವೇದಿಕೆ ವತಿಯಿಂದ ಆಯೋಜಿಸಿದ್ದ ಕನಕದಾಸ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ ಮಹಾನ್‌ಕವಿ, ಸಂತ, ತತ್ವಜ್ಞಾನಿ ಸಂಗೀತಗಾರ, ದಾರ್ಶನಿಕ ಎಂಬ ಬಿರುದಾಂಕಿತರಾದ ಕನಕದಾಸರ ಸರಳ ಕೀರ್ತನೆಗಳು ಎಂದೆಂದಿಗೂ ಪ್ರಸ್ತುತ. ದಾಸರಲ್ಲಿ ಕವಿ, ಕವಿಗಳಲ್ಲಿ ದಾಸರೆಂಬ ಹೆಗ್ಗಳಿಕೆ ಇವರದ್ದು. ಇಂದಿನ ಆಧುನಿಕ ಸಮಾಜಕ್ಕೆ ಇವರ ತತ್ವ ಸಂದೇಶಗಳ ಅವಶ್ಯಕತೆಯಿದೆ. ಇವರ ವಿಶ್ವಮಾನವ ಪರಿಕಲ್ಪನೆಯ ಸಂದೇಶಗಳು ಸಾರ್ವಕಾಲಿಕ ಪ್ರಸ್ತುತತೆಯನ್ನು ಪಡೆದಿವೆ ಎಂದು ತಿಳಿಸಿದರು.

ಪ್ರಾಚಾರ್ಯರಾದ ಪ್ರೊ. ಉಮೇಶ ಕನಕದಾಸರು ಸಮಾಜ ಸುಧಾರಕರಾಗಿ ತಮ್ಮ ಕೊಡುಗೆಗೆ ಹೆಸರುವಾಸಿಯಾಗಿದ್ದಾರೆ. ಇವರು ಸಮಾಜದಲ್ಲಿ ಹೇಗೆ ಬದಲಾವಣೆ ತಂದರು, ಸಮಾನತೆಯ ಸಂದೇಶಗಳನ್ನು ಹರಡುವಲ್ಲಿ ಮತ್ತು ಸಾಮಾಜಿಕ ಸಮುದಾಯವನ್ನು ಉನ್ನತೀಕರಿಸುವಲ್ಲಿ ಇವರು ವಹಿಸಿದ ಸಕ್ರಿಯ ಪಾತ್ರದ ಬಗ್ಗೆ ಇವರ ಜಯಂತಿ ಆಚರಣೆ ಮೂಲಕ ಅರಿಯಬೇಕಿದೆ. ಕರ್ನಾಟದಲ್ಲಿ ಭಕ್ತಿ ಸಾಹಿತ್ಯವನ್ನು ಜನರಿಗೆ ಉಣಬಡಿಸಿದರು. ಕನ್ನಡ ಸಾಹಿತ್ಯಕ್ಕೆ ಮಹತ್ತರವಾದ ಕೊಡುಗೆ ನೀಡಿದರು. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರಾದ ಇವರ ಜೀವನವೇ ಒಂದು ಆದರ್ಶ ಎಂದು ತಿಳಿಸಿದರು.

ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

□

## ಸಾಧನೆ–ಸನ್ಮಾನ



ಯಳಂದೂರಿನ ಜೆಎಸ್‌ಎಸ್ ಬಾಲಿಕಾ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ಕು. ಎಂ. ಶಿಲ್ಪ ಜಿಲ್ಲಾಮಟ್ಟದಲ್ಲಿ ನಡೆದ ಆಜಾದಿ ಕಾ ಅಮೃತ ಮಹೋತ್ಸವ ಪ್ರಬಂಧ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಪ್ರಶಂಸಿಸಿ ಶುಭ ಕೋರಿದ್ದಾರೆ.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಸಂವಿಧಾನ ದಿನಾಚರಣೆ

### ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಬಿ.ಎನ್. ರಸ್ತೆ, ಮೈಸೂರು

ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ಮೇಲೆತ್ತುವುದೇ ಮೀಸಲಾತಿಯ ಅಂತಿಮ ಗುರಿಯಾಗಿದೆ. ಇದು ಜಾತಿ ಆಧಾರಿತವಾದುದಲ್ಲ ಎಂದು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕಾನೂನು ವಿಭಾಗದ ಪ್ರಾಧ್ಯಾಪಕರಾದ ಡಾ. ಜಾಹ್ನವಿಯವರು ಹೇಳಿದರು.

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ ಸಂವಿಧಾನ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು. ನಮ್ಮ ಸಂವಿಧಾನವು ವಿಶ್ವಕಂಡ ಮಹಾ ಸಂವಿಧಾನವಾಗಿದೆ. ಇಲ್ಲಿ ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಡಲಾಗಿದೆ. ಆ ಹಿನ್ನೆಲೆಯಲ್ಲಿಯೇ ಮೀಸಲಾತಿಗೆ ಅವಕಾಶವಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಮೀಸಲಾತಿಯಿದೆ ಎಂದು ಜಾತಿ ನೆಲೆಯಲ್ಲಿ ಅದನ್ನು ಅರ್ಥೈಸಬಾರದು. ಅಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರು ಹೆಚ್ಚು ಇರುವುದರಿಂದ ಅಲ್ಲಿ ಮೀಸಲಾತಿಯಿದೆ ಎಂದು ಭಾವಿಸಬೇಕು ಎಂದರು.

ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯರವರು ಮಾತನಾಡಿ ಭಾರತದ ಸಂವಿಧಾನವು ಬ್ರಿಟನ್, ಐರ್ಲೆಂಡ್, ಜಪಾನ್, ಅಮೇರಿಕಾ, ದಕ್ಷಿಣ ಆಫ್ರಿಕಾ, ಜರ್ಮನಿ, ಆಸ್ಟ್ರೇಲಿಯಾ ಮತ್ತು ಕೆನಡಾ ಸೇರಿದಂತೆ ಇತರ ದೇಶಗಳಿಂದ ಹಲವು ವಿಷಯಗಳನ್ನು ಎರವಲು ಪಡೆದುಕೊಂಡಿದೆ. ಭಾರತದ ಸಂವಿಧಾನ ಸಭೆಯು 2 ವರ್ಷ, 11 ತಿಂಗಳು ಮತ್ತು 18 ದಿನಗಳಲ್ಲಿ 166 ದಿನಗಳ ಕಾಲ ಸಭೆ ನಡೆಸಿ ಬೃಹತ್ತಾದ ಸಂವಿಧಾನವನ್ನು ರಚಿಸಿದೆ. ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದ್ ಅವರು ಸಂವಿಧಾನವನ್ನು ಅಂಗೀಕರಿಸುವ ಪ್ರಸ್ತಾವನೆಯನ್ನು ಮಂಡಿಸುವ ಮೊದಲು ತಮ್ಮ ಭಾಷಣದಲ್ಲಿ ಮಹಾತ್ಮ ಗಾಂಧೀಜಿಯವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು ಮತ್ತು ಸಂವಿಧಾನವನ್ನು ಕಾರ್ಯಗತಗೊಳಿಸಲು ಯಾರೆಲ್ಲರ ಶ್ರಮವಿದೆಯೋ ಅವರೆಲ್ಲರಿಗೂ ಒಳ್ಳೆಯದಾಗಲಿ ಎಂದು ಹೇಳಿದರು. ಅಂತೆಯೇ ಸಂವಿಧಾನದ ಅಡಿಯಲ್ಲಿ ಬದುಕುತ್ತಿರುವ ನಾವುಗಳು ಸಂವಿಧಾನದ ನಿರ್ಮಾತೃಗಳಿಗೆ ಗೌರವ ಸಲ್ಲಿಸುವ ದಿನ ಇದಾಗಿದೆ. ಅಂಬೇಡ್ಕರರ ಶ್ರಮವನ್ನು ಮತ್ತು ಕೊಡುಗೆಯನ್ನು ನಾವು ಸದಾ ಸ್ಮರಿಸೋಣ ಎಂದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಆರ್.ಜಿ. ಆಶಾ ಸಂವಿಧಾನದ ಪ್ರಸ್ತಾವನೆಯನ್ನು ಓದಿದರು. ಪ್ರಾಂಶುಪಾಲರಾದ ಪ್ರೊ. ಹೆಚ್.ಸಿ. ಹೊನ್ನಪ್ಪರವರು ಸ್ವಾಗತಿಸಿದರು. ಪ್ರಾಧ್ಯಾಪಕರಾದ ಕು. ಶ್ರಾವ್ಯ ಪ್ರಾರ್ಥಿಸಿದರು, ಶ್ರೀಮತಿ ಎಲ್.ಎಸ್. ಶೃತಿ ವಂದಿಸಿದರು, ಶ್ರೀಮತಿ ಕೆ.ಸಿ. ಶೃತಿ ನಿರೂಪಿಸಿದರು.

## ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ಜಗತ್ತಿನಲ್ಲಿಯೇ ದೊಡ್ಡ ಸಂವಿಧಾನ ಎಂಬ ಹಿರಿಮೆ ನಮ್ಮ ಸಂವಿಧಾನಕ್ಕಿದ್ದು, ಇದುವೇ ಭಾರತದ ಅತಿ ದೊಡ್ಡ ಶಕ್ತಿ ಹಾಗೂ ಗೌರವ. ಸರ್ವರಿಗೂ ಸಮಾನತೆ ಮೂಲಭೂತ ಹಕ್ಕುಗಳು, ಕರ್ತವ್ಯವನ್ನು ನೀಡಿರುವ ಇದು ದೇಶದ ಜನರನ್ನು ಸಶಕ್ತಗೊಳಿಸುವ ಶಕ್ತಿಯಾಗಿದೆ ಎಂದು ರಾಜ್ಯಶಾಸ್ತ್ರ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಕೆ.ಆರ್. ಗುರುಪ್ರಸಾದ್ ಹೇಳಿದರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 26.11.2021ರಂದು ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ್ದ 'ಸಂವಿಧಾನ ದಿನಾಚರಣೆ' ಕಾರ್ಯಕ್ರಮದಲ್ಲಿ ಮಾತನಾಡಿದರು.

ವಿಶ್ವದಲ್ಲಿಯೇ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಮೂಲಾಧಾರ ನಮ್ಮ ಸಂವಿಧಾನ. ಭಾರತದ ಪವಿತ್ರ ಗ್ರಂಥ ಇದಾಗಿದ್ದು ಎಲ್ಲಾ ಧರ್ಮಿಯರು ಹೇಗೆ ಬಾಳಬೇಕು ಎಂಬುದನ್ನು ಇದು ತಿಳಿಸುತ್ತದೆ. ತನ್ನದೇ ಆದ ಇತಿಹಾಸ, ಮಹತ್ವ ಹೊಂದಿರುವ ನಮ್ಮ ಸಂವಿಧಾನ ಜಗತ್ತಿನಲ್ಲಿಯೇ ಅತಿದೊಡ್ಡ ಲಿಖಿತ ಸಂವಿಧಾನವಾಗಿದೆ. 1949ರಲ್ಲಿ ಇದನ್ನು ಅಳವಡಿಸಿಕೊಂಡಿದ್ದರೂ 2015 ರಿಂದ ಪ್ರತೀ ವರ್ಷ ನವೆಂಬರ್ 26 ಅನ್ನು ಸಂವಿಧಾನ ದಿನವನ್ನಾಗಿ ಆಚರಿಸಲಾಗುತ್ತಿದೆ. ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್‌ರವರಿಗೆ ಗೌರವ ಸಲ್ಲಿಕೆ ಹಾಗೂ ಇದನ್ನು ಅಳವಡಿಸಿಕೊಂಡ ದಿನದ ಸ್ಮರಣೆಗಾಗಿ ಈ ದಿನವನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಪ್ರಾಚಾರ್ಯರಾದ ಪ್ರೊ. ಉಮೇಶ ನಮ್ಮ ದೇಶದಲ್ಲಿ ಜಾರಿಯಲ್ಲಿರುವ ಆಡಳಿತ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ ಎಲ್ಲ ರೀತಿಯ ಕಾನೂನುಗಳ ಮೂಲ ಆಧಾರ ನಮ್ಮ ಸಂವಿಧಾನ. ಇದನ್ನು ಓದಿ, ಅರ್ಥೈಸಿಕೊಂಡು ಇದರ ಮೌಲ್ಯಗಳನ್ನು ಜೀವನದಲ್ಲಿ ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕಿದೆ. ದೇಶದ ಆಡಳಿತ ವ್ಯವಸ್ಥೆ ಸಂವಿಧಾನದ ಮೇಲೆ ಅವಲಂಬಿತವಾಗಿದ್ದು, ದೇಶದ ಆರ್ಥಿಕ, ಶೈಕ್ಷಣಿಕ, ಆರೋಗ್ಯ, ಸಾಮಾಜಿಕ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿಯೂ ಬೆಳೆಯಲು ಸಂವಿಧಾನ ಮುಖ್ಯ ಪಾತ್ರ ವಹಿಸುತ್ತದೆ. ಕಾನೂನು ಇಲ್ಲದ ಸಮಾಜವನ್ನು ಊಹಿಸಿಕೊಳ್ಳಲು ಅಸಾಧ್ಯ. ಪ್ರತಿಯೊಬ್ಬರೂ ಸಂವಿಧಾನ ರಕ್ಷಣೆ ಮಾಡಿ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕು ಎಂದು ಕರೆ ನೀಡಿದರು

ವಿದ್ಯಾರ್ಥಿನಿಯರಾದ ಕು. ಡಿ.ಬಿ. ಪ್ರಿಯಾಂಕ ಮತ್ತು ಕು. ರಾಜೇಶ್ವರಿ ಸಂವಿಧಾನದ ಮಹತ್ವ ಕುರಿತು ಮಾತನಾಡಿದರು ಶ್ರೀ ಕೆ.ಎಸ್. ಪ್ರಕಾಶ್ ಪ್ರತಿಜ್ಞಾ ವಿಧಿ ಬೋಧಿಸಿದರು. ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕು. ಚಂದ್ರಿಕಾ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ, ಮೈಸೂರು

ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆ ವತಿಯಿಂದ ಜ್ಯೋತಿ ನಿಲಯ ಟ್ರಸ್ಟ್ ಸಹಯೋಗದೊಂದಿಗೆ ದಿನಾಂಕ 26.11.2021ರಂದು ಸಂವಿಧಾನ ದಿನಾಚರಣೆಯನ್ನು ಆಚರಿಸಲಾಯಿತು. ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಡಿ.ಎಂ. ಶಶಿಕಲಾರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಸಂವಿಧಾನದ ಬಗ್ಗೆ ಹಾಗೂ ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮಗಳು ಹಾಗೂ ಕಾರ್ಯ ವೈಖರಿಯ ಬಗ್ಗೆ ತಿಳಿಸಿದರು. ಜ್ಯೋತಿನಿಲಯ ಪ್ರೌಢಶಾಲೆಯ ರಾಜ್ಯಶಾಸ್ತ್ರ ಶಿಕ್ಷಕರಾದ ಶ್ರೀ ರವಿರವರು ನವೆಂಬರ್ 26ನ್ನು ಸಂವಿಧಾನ ದಿನದ ವಿಶೇಷತೆ, ಸಂವಿಧಾನದ ಭಾಗಗಳು, ಅನುಸೂಚಿ, ತಿದ್ದುಪಡಿಗಳು ಹಾಗೂ ಡಾ. ಬಿ.ಆರ್. ಅಂಬೇಡ್ಕರ್‌ರವರ ಕೊಡುಗೆಯನ್ನು ಬಹಳ ಸಂಕ್ಷಿಪ್ತವಾಗಿ ತಿಳಿಸಿದರು.

ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮ ಸಹಾಯಕರಾದ ಶ್ರೀ ಮಹಾದೇವಸ್ವಾಮಿಯವರು ಸಂವಿಧಾನದ ಪ್ರಸ್ತಾವನೆಯ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಕಲಿಕಾರ್ಥಿಗಳು, ಬೋಧಕರು,



ಜ್ಯೋತಿನಿಲಯದ ನಿರ್ದೇಶಕರಾದ ಶಾಂತಿ ಸಿಸ್ಟರ್ ಹಾಗೂ ಪ್ರೌಢಶಾಲೆಯ ಪ್ರಾಂಶುಪಾಲರಾದ ಸಿಸ್ಟರ್ ಗ್ರೇಟಾರವರು, ಜನಶಿಕ್ಷಣ ಸಂಸ್ಥೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆ, ಮೇಟಗಳ್ಳಿ

ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ದಿನಾಂಕ 26.11.2021ರಂದು ಸಂವಿಧಾನ ದಿನಾಚರಣೆಯನ್ನು ಆಚರಿಸಲಾಯಿತು.

ಮುಖ್ಯೋಪಾಧ್ಯಾಯರಾದ ಶ್ರೀ ಎನ್.ಪಿ. ಸತೀಶ್‌ರವರು ಪ್ರತಿಯೊಬ್ಬ ವ್ಯಕ್ತಿಯು ಕಾನೂನಿಗೆ ಅನುಗುಣವಾಗಿ ಜೀವಂತವಾಗಿ ಇರುವವರೆಗೂ ನಡೆದುಕೊಳ್ಳಬೇಕು. ಭಾರತದ ಜನತೆಯಾದ ನಾವು ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ ಶ್ರಮಿಸಬೇಕು. ಪ್ರಪಂಚದ ಶ್ರೇಷ್ಠ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ರಾಷ್ಟ್ರಗಳಲ್ಲಿ ಭಾರತವು ಅಗ್ರಸ್ಥಾನದಲ್ಲಿದೆ ಎಂದು ಹೇಳಿ ಮಕ್ಕಳಿಗೆ ಭಾರತದ ಸಂವಿಧಾನದ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

